2. ಕರ್ನಾಟಕ ಸರ್ಕಾರದ ಧೋರಣೆ ಮತ್ತು ಕಾರ್ಯಕ್ರಮಗಳು ಹಾಗೂ ಅವುಗಳ ಅನುಷ್ಠಾನ ವಿಧಾನದ ಬಗ್ಗೆ ಇರುವ ತಮ್ಮ ಪ್ರಚಂಡ ಬೆಂಬಲವನ್ನು ರಾಜ್ಯದ ಜನತೆ ಈಚೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೊಮ್ಮೆ ಸ್ಪಷ್ಟವಾಗಿ, ಎತ್ತಿ ತೋರಿಸಿದೆ. ವಿಪರೀತ ಅಡಚಣೆಗಳು, ನಿಸರ್ಗ ಪ್ರಕೋಪಗಳನ್ನು ಎದುರಿಸಿಯೂ ಸರ್ಕಾರ ಸಾಧಿಸಿದ ಪ್ರಗತಿಗೆ ದೊರಕಿರುವ ಸ್ಪಷ್ಟ ಮತ ಇದು. ಸರ್ಕಾರದ ಚಿಂತನೆ ಮತ್ತು ಆಚರಣೆಗಳಲ್ಲಿ ಅಡಗಿರುವ ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ವೈಶಿಷ್ಟ್ಯಕ್ಕೆ ಹಾಗೂ ಕಳೆದ ಐದು ವರ್ಷಗಳ ಅವಧಿಯಲ್ಲಿ ನಾವು ನೀಡಿದ ಭದ್ರ ಹಾಗೂ ಪ್ರಗತಿಶೀಲ ಸರ್ಕಾರಕ್ಕೆ ದೊರೆತ ಸಾರ್ವತ್ರಿಕ ಮನ್ನಣೆ ಇದು. ಕರ್ನಾಟಕದ ಸಮೃದ್ಧಿಗೆ ಬುನಾದಿ ಬಿದ್ದುದು ಈ ಅವಧಿಯಲ್ಲಿ. ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗೆ ಹೆಚ್ಚು ಗಮನ ನೀಡಿ ರಾಜ್ಯದ ಆರ್ಥಿಕ ಅಡಿಗಲ್ಲನ್ನು ಇನ್ನಷ್ಟು ಭದ್ರಗೊಳಿಸುವ ಪ್ರಯತ್ನವನ್ನು ಸರ್ಕಾರ ಸತತವಾಗಿ ಮುಂದುವರಿಸುವುದು. ಅದೇ ವೇಳೆ ಬಡಜನರಿಗೆ ಪ್ರಗತಿಯ ಪ್ರಯೋಜನ ನೇರವಾಗಿ ಶೀಘ್ರವಾಗಿ ದೊರೆಯುವಂತಾಗಲು ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಬಲಪಡಿಸಿ ಕರ್ನಾಟಕದಾದ್ಯಂತ ವಿಸ್ತರಿಸಲಾಗುವುದು. ನಮ್ಮ ಯೋಜನೆಗಳು ಸಮತೋಲನ ಅಭಿವೃದ್ಧಿಗೆ ಅಗತ್ಯವಾದ ಅಲ್ಪ ಹಾಗೂ ದೀರ್ಘ ಕಾಲಾವಧಿಯ ಅಂಶಗಳ ಬೆಸುಗೆಯಾಗಿದೆ. ಕರ್ನಾಟಕದಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಶ್ರೀಸಾಮಾನ್ಯ ಹಾಗೂ ಸಮಾಜದ ದುರ್ಬಲ ವರ್ಗದವರಿಗೆ ಅನುಕೂಲವಾಗುವಂತೆ ವಿವಿಧ ಕಾರ್ಯಕ್ರಮಗಳನ್ನು ಬಲಪಡಿಸಲಾಯಿತು. ಹಣದುಬ್ಬರ ಹಿಡಿತಕ್ಕೆ ಬಂತು. ಅಗತ್ಯ ವಸ್ತುಗಳ ಬೆಲೆಗಳು ಕೆಳಗೆ ಇಳಿದವು. ಹಾಗಾಗದೇ ಹೋಗಿದ್ದರೆ ಬಡವರ್ಗದ ಜನರಿಗೆ ವಿಪರೀತ ಕಷ್ಟವಾಗುತ್ತಿತ್ತು. ಕಾಳಸಂತೆಕೋರರು, ಕಳ್ಳಸಾಗಾಣಿಕೆದಾರರು ಹಾಗೂ ಅಕ್ರಮ ದಾಸ್ತಾನುಗಾರರ ವಿರುದ್ಧ ರಾಷ್ಟ್ರಮಟ್ಟದಲ್ಲಿ ಕೈಗೊಂಡ ಕ್ರಮಗಳು ಬೆಲೆಮಟ್ಟ ಸ್ಥಿಮಿತದಲ್ಲಿರಲು ಮುಖ್ಯ ಕಾರಣ. ಈಗಿನ ಪ್ರಗತಿಯ ವೇಗವನ್ನು ಕಾಪಾಡಿಕೊಂಡು ಬರಬೇಕಾದರೆ ಶಿಸ್ತು ಹಾಗೂ ರಚನಾತ್ಮಕ ಸಹಕಾರದ ವಾತಾವರಣ ಮುಂದುವರಿದುಕೊಂಡು ಬರುವುದು ಅಗತ್ಯ. ಅಂತಿಮವಾಗಿ ಹೇಳುವುದಾದರೆ ದೇಶದ ಏಕತೆ ಮತ್ತು ಪ್ರಗತಿಯು ನಮ್ಮ ರಾಷ್ಟ್ರದ ಮೂರು ಧ್ಯೇಯ ಸೂತ್ರಗಳಾದ ಸಮಾಜವಾದ. ಜಾತ್ಯಾತೀತತೆ ಮತ್ತು ಪ್ರಜಾತಂತ್ರದ ಮೇಲೆ ಅವಲಂಬಿಸಿಕೊಂಡಿರಬೇಕಾಗುತ್ತದೆ. ಈ ಮೂರು ಸೂತ್ರಗಳು ಕಾಲದ ಪರೀಕ್ಷೆಯನ್ನು ಎದುರಿಸಿವೆ, ಈ ಎಲ್ಲ ವರ್ಷಗಳಲ್ಲೂ ನಮ್ಮ ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನವನ್ನು ನೀಡಿವೆ.

ಕ್ಷಾಮ

3. ಮುಂಗಾರು ಮಳೆಬಾರದ ಪರಿಸ್ಥಿತಿಯು ಇನ್ನೂ ಹದಗೆಟ್ಟಿದ್ದರಿಂದ ಹದಿನೇಳು ಜಿಲ್ಲೆಗಳಿಗೆ ಸೇರಿದ ನೂರಹದಿನೇಳು ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿಯುಂಟಾಯಿತು ಇವುಗಳ ಪೈಕಿ ನಲವತ್ತೆಂಟು ತಾಲ್ಲೂಕುಗಳಲ್ಲಿ ಪೂರ್ಣ ಕ್ಷಾಮವಿದ್ದು, 44 ತಾಲ್ಲೂಕುಗಳಲ್ಲಿ ಭಾಗಶಃ ಕ್ಷಾಮವು ತಲೆದೋರಿದೆ ಮತ್ತು ಇನ್ನೂ 25 ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿಯು ಒಣ ಪ್ರದೇಶಗಳಿಗೆ ಸೀಮಿತವಾಗಿದೆ. ಆದುದರಿಂದ, ಮುಂದಿನ ಕೆಲವು ತಿಂಗಳುಗಳಲ್ಲಿ, ರಾಜ್ಯದ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಜನರಿಗೆ ಸಾಕಷ್ಟು ಉದ್ಯೋಗಾವಕಾಶ ಒದಗಿಸಿ ಕೊಡುವುದು, ಯೋಗ್ಯ ಬೆಲೆಯಲ್ಲಿ ಆಹಾರ ಧಾನ್ಯವನ್ನು ಪೂರೈಸುವುದು, ಮತ್ತು ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದ ಪ್ರಥಮ ಹೊಣೆಯಾಗಿದೆ. ಈ ತೊಂದರೆಯು ಕೆಲವು ಪ್ರದೇಶಗಳಲ್ಲಿ ಬಹು ತೀವ್ರಸ್ವರೂಪದ್ದಾಗಿದೆ. ಈ ಪರಿಸ್ಥಿತಿಯನ್ನು ತಕ್ಕ ರೀತಿಯಲ್ಲಿ ಎದುರಿಸಲು ಸರ್ಕಾರವು ದೃಢನಿರ್ಧಾರ ಕೈಕೊಂಡಿದೆ. ವಿಶೇಷವಾಗಿ ಭೂಸಾರ ರಕ್ಷಣೆ, ಸಣ್ಣ ಪ್ರಮಾಣದ ನೀರಾವರಿ, ಅರಣ್ಯ ಬೆಳೆಸುವಿಕೆ ಮತ್ತು ಗ್ರಾಮಾಂತರ ರಸ್ತೆ ನಿರ್ಮಾಣ, ಈ ಪರಿಹಾರ ಕಾಮಗಾರಿಗಳಲ್ಲಿ ಈಗಾಗಲೇ ಸುಮಾರು 3 ಲಕ್ಷ ಜನರಿಗೆ ಉದ್ಯೋಗಾವಕಾಶ ಒದಗಿಸಿಕೊಡಲಾಗಿದೆ. ಸುಮಾರು 1,100 ಭೂಸಾರ ರಕ್ಷಣೆ ಕಾಮಗಾರಿ ಕೇಂದ್ರಗಳಲ್ಲಿ ಸುಮಾರು 1.20 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಗ್ರಾಮಾಂತರ ಜನತೆಗೆ ಉದ್ಯೋಗ ಕಲ್ಪಿಸಲು ಅವಶ್ಯವಾಗುವ ಮಟ್ಟಿಗೆ ಈ ಕಾಮಗಾರಿ ಕೇಂದ್ರಗಳನ್ನು ಇನ್ನಷ್ಟು ಹೆಚ್ಚಿಸಲಾಗುವುದು, ಭೂಸಾರ ರಕ್ಷಣೆಗೆ ಪ್ರಸಕ್ತ ವರ್ಷದಲ್ಲಿ ನಿಗದಿಮಾಡಿದ ಬಂಡವಾಳವು ಹೆಚ್ಚು ಕಡಿಮೆ 3.30 ಕೋಟಿ ರೂಪಾಯಿಯ ಮೂಲ ಯೋಜನಾ ಬಂಡವಾಳದ ಎರಡರಷ್ಟಾಗುವುದು. ಸುಮಾರು ಮೂರು ಲಕ್ಷ ಹೆಕ್ಟೇರುಗಳಲ್ಲಿ ಪ್ರಸಕ್ತ ವರ್ಷ ಒಡ್ಡು ಹಾಕುವ ಕೆಲಸವು ನಡೆಯಬಹುದಾಗಿದೆ, ಮತ್ತು ಎರಡು ಲಕ್ಷ ಹೆಕ್ಟೇರುಗಳಲ್ಲಿ ಕೆರೆಕಟ್ಟೆಗಳ ಕಾರ್ಯವು ಪೂರ್ಣಗೊಳ್ಳುವುದು.

4. ಪ್ರಸಕ್ತ ವರ್ಷದ 11 ಕೋಟಿ ರೂಪಾಯಿ ಯೋಜನಾ ಬಂಡವಾಳಕ್ಕಿಂತ ಹೆಚ್ಚಾಗಿ ಡಿ. ಪಿ. ಎ. ಪಿ. ಯೋಜನೆಯೂ ಸೇರಿ ಸಣ್ಣ ಪ್ರಮಾಣದ ನೀರಾವರಿಗಾಗಿ ನಾವು 4.3 ಕೋಟಿ ರೂಪಾಯಿ ವೆಚ್ಚಮಾಡಬಹುದಾಗಿತ್ತು. ಇದರಲ್ಲಿ ಯೋಜನೇತರ ಸಣ್ಣ ಪ್ರಮಾಣದ ನೀರಾವರಿಯ ದುರಸ್ತಿ ಮತ್ತು ನಿರ್ವಹಣೆಗೆ ಸಂಬಂಧಿಸಿದ 6.65 ಕೋಟಿ ರೂಪಾಯಿ ಬಂಡವಾಳವು ಸೇರಿಲ್ಲ. ಇವೆಲ್ಲವೂ ಒಟ್ಟು ಸೇರಿದರೆ 22.00 ಕೋಟಿ ರೂಪಾಯಿಯಷ್ಟಾಗುತ್ತದೆ. ಕೆಲಸ ನಡೆಯುತ್ತಿರುವ ಸಣ್ಣ ಪ್ರಮಾಣದ ನೀರಾವರಿ ಕಾಮಗಾರಿಗಳು ಒಟ್ಟು 1,167. ಈ ವರ್ಷ ಪ್ರಾರಂಭಿಸಿದ 485 ಹೊಸ ಕಾಮಗಾರಿಗಳು ಇದರಲ್ಲಿ ಸೇರಿವೆ. ಈ ಎಲ್ಲ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಸುಮಾರು 21 ಕೋಟಿ ರೂಪಾಯಿಯಷ್ಟು ಒಟ್ಟು ಬಂಡವಾಳವು ಅಗತ್ಯವಾಗುವುದು. ಇದಲ್ಲದೆ, ಜನಗಳಿಗೆ ಉದ್ಯೋಗ ಒದಗಿಸುವ ಮತ್ತು ಸಧ್ಯ ಇರುವ ಅಚ್ಚುಕಟ್ಟುಗಳನ್ನು ಬಲಗೊಳಿಸುವ ದೃಷ್ಟಿಯಿಂದ ವಿಶೇಷವಾಗಿ ಕೆರೆ ದುರಸ್ತಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ಇನ್ನೂ 2,683 ಸಣ್ಣ ಪ್ರಮಾಣದ ಕಾಮಗಾರಿಗಳನ್ನು ಕೈಕೊಂಡಿದ್ದೇವೆ. ಈ ಎಲ್ಲ ಕಾಮಗಾರಿಗಳಲ್ಲಿ ಈಗ ಸುಮಾರು 55 ಸಾವಿರ ಜನರಿಗೆ ಉದ್ಯೋಗ ದೊರಕಿದೆ. ಸಣ್ಣ ನೀರಾವರಿ ಕಾರ್ಯಕ್ರಮವನ್ನು ಇನ್ನೂ ತ್ವರಿತಗೊಳಿಸುವ ದೃಷ್ಟಿಯಿಂದ ಸುಮಾರು 15 ಕೋಟಿ ರೂಪಾಯಿ ವೆಚ್ಚ ತಗಲುವ ಇನ್ನೂ ಕೆಲವು ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ನಿರ್ಧರಿಸಿದೆ. ಇದರಿಂದ ಎಲ್ಲೆಲ್ಲಿ ಸಣ್ಣ ನೀರಾವರಿಗಳನ್ನು ಕಾಮಗಾರಿಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆಯೋ ಅಲ್ಲೆಲ್ಲಾ ಅಂಥ ಕಾಮಗಾರಿ ಕೈಕೊಳ್ಳಲು ಮತ್ತು ರಾಜ್ಯದ ಎಲ್ಲ ಭಾಗಗಳಿಗೆ ತಕ್ಕ ಗಮನ ನೀಡಲು, ಸರ್ಕಾರಕ್ಕೆ ಅನುಕೂಲವಾಗುವುದು. ಈ ಕಾಮಗಾರಿಗಳ ವಿವರವಾದ ಒಂದು ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

5. ಈ ವರ್ಷ ಕೆಲಸ ನಡೆದಿರುವ ಮತ್ತೊಂದು ಉತ್ತಮ ಕಾಮಗಾರಿ ಎಂದರೆ, ಕೊರೆ ಬಾವಿಗಳ ಕಾರ್ಯಕ್ರಮ ಎಂದು ಹೇಳಬಹುದು. ವಿಶೇಷವಾಗಿ ಅಭಾವ ಪರಿಸ್ಥಿತಿಯನ್ನೂ ಮತ್ತು ಮುಂದೆ ನಾವು ಎದುರಿಸಬೇಕಾದ ಬೇಸಿಗೆ ಕಾಲದ ಅಸಾಧಾರಣ ಸ್ಥಿತಿಗತಿಯನ್ನೂ

ಅನುಲಕ್ಷಿಸಿ ಈ ಕಾರ್ಯಕ್ರಮಕ್ಕೆ ಸರಕಾರವು ಎಲ್ಲಕ್ಕಿಂತ ಹೆಚ್ಚಿನ ಗಮನ ನೀಡಬೇಕಾಗಿದೆ. ಸುಮಾರು 90 ಅತಿವೇಗದ 'ರಿಗ್' ಯಂತ್ರಗಳು ಈಗಾಗಲೇ ಕೆಲಸ ಪ್ರಾರಂಭಿಸಿವೆ. ಕೊರೆ ಬಾವಿಗಳನ್ನು ತೆಗೆಯಲು ಬಜೆಟ್ಟಿನಲ್ಲಿ ಮೂಲತಃ 2 2 ಕೋಟಿ ರೂಪಾಯಿ ಹಣ ಒದಗಿಸಲಾಗಿತ್ತು. ಆದರೆ ಈ ವರ್ಷ 5 ಕೋಟಿ ರೂಪಾಯಿಗಿಂತ ಹೆಚ್ಚು ಹಣ ವೆಚ್ಚ ಮಾಡಿ ಕನಿಷ್ಠ ಪಕ್ಷ 5,000 ಕೊರೆ ಬಾವಿಗಳನ್ನು ನಿರ್ಮಿಸಲು ಉದ್ದೇಶಿಸಿದ್ದೇವೆ. ಕಳೆದ 5 ವರ್ಷಗಳಲ್ಲಿ ಸುಮಾರು 11,800 ಕೊರೆ ಬಾವಿಗಳನ್ನು ತೋಡಲಾಗಿದೆ. 8,700 ಗ್ರಾಮಗಳಲ್ಲಿ 9,900 ಬಾವಿಗಳನ್ನು ತೋಡುವ ಕೆಲಸವು ಯಶಸ್ವಿಯಾಗಿದ್ದು, ಇವುಗಳಿಂದ 69 ಲಕ್ಷ ಜನರಿಗೆ ಪ್ರಯೋಜನವಾಗಿದೆ. ಈ ಅವಧಿಯಲ್ಲಿ 9,433 ತೆರೆ ಬಾವಿಗಳನ್ನು ನಿರ್ಮಿಸಲಾಗಿದೆ. ಯಾವ ಗ್ರಾಮದಲ್ಲಿಯೂ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗದಂತೆ ಪ್ರಯತ್ನಿಸಲಾಗುವುದು. ಈ ಕೆಲಸದಲ್ಲಿ ಹಣಕಾಸಿನ ಸಮಸ್ಯೆ ಉಂಟಾಗದು.

6. ದುರ್ಬಲವರ್ಗದವರಿಗೆ ಆಹಾರಧಾನ್ಯಗಳನ್ನು ಯೋಗ್ಯ ಬೆಲೆಯಲ್ಲಿ ಹಂಚುವ ಕಾರ್ಯಕ್ರಮವು ನಮ್ಮ ನೀತಿಯ ಮುಖ್ಯೋದ್ದೇಶವಾಗಿದೆ. ಆಹಾರ ಧಾನ್ಯದ ಬೆಲೆಗಳು, ವಿಶೇಷವಾಗಿ ಕ್ಷಾಮ ಪೀಡಿತ ಪ್ರದೇಶಗಳಲ್ಲಿ, ಬಡವರ ಖರೀದಿ ಸಾಮರ್ಥ್ಯಕ್ಕಿಂತ ಮೇಲೇರದಂತೆ ನೋಡಿಕೊಳ್ಳಬೇಕಾಗಿದೆ. ಅಭಿವೃದ್ಧಿ ಪರಿಹಾರ ಕಾಮಗಾರಿಗಳಲ್ಲಿ ಜನರಿಗೆ ಸಾಕಷ್ಟು ಉದ್ಯೋಗ ಅವಕಾಶ ಒದಗಿಸುವುದು ಮತ್ತು ಯೋಗ್ಯ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ನಿರಾತಂಕವಾಗಿ ಪೂರೈಸುವುದು, ಈ ಎರಡೂ ಕಾರ್ಯಕ್ರಮಗಳು ಜನರಿಗೆ ತೊಂದರೆಯಾಗದಂತೆ ಒಂದಕ್ಕೊಂದು ಪೂರಕವಾಗಿರಬೇಕೆಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಮಿಲೋ ಧಾನ್ಯವು ದೊರೆತುದರಿಂದ ಈ ವರ್ಷ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸಲು ಮತ್ತು ಬಲಪಡಿಸಲು ನಮಗೆ ಅನುಕೂಲವಾಯಿತೆಂದು ಹೇಳಬಹುದು. ಬಹಿರಂಗ ಮಾರುಕಟ್ಟೆಯಲ್ಲಿ ಜೋಳವು 1 ಕಿಲೋಗ್ರಾಂ.ಗೆ 1ರೂ. 25 ಪೈಸೆಯಿಂದ 1ರೂ. 55 ಪೈಸೆಯ ವರೆಗೆ ದೊರೆಯುತ್ತಿದೆ, ಆದರೆ ಮಿಲೋವನ್ನು 95 ಪೈಸೆಗೆ 1 ಕಿ.ಗ್ರಾಂ ನಂತೆ ಮಾರಾಟ ಮಾಡಲಾಗುತ್ತಿದೆ. ಪ್ರತಿ ತಿಂಗಳೂ ನಮಗೆ 20,000 ಟನ್ನು ಮಿಲೋ ದೊರೆಯುತ್ತಿದೆ. ಅಗತ್ಯವಿದ್ದರೆ ಇನ್ನೂ ಹೆಚ್ಚು ಮಿಲೋ ಒದಗಿಸಬಹುದಾಗಿದೆ.

7. ಮಿಲೋ ವಿತರಣಾ ಕಾರ್ಯವನ್ನು ಸಹಕಾರಿ ಸಂಘಗಳಿಗೆ ವಹಿಸಿಕೊಟ್ಟಿದ್ದರಿಂದ ಕೆಲಸವು ಹೆಚ್ಚು ಸುಗಮವಾಯಿತೆಂದು ಹೇಳಬಹುದು. ಈ ಉದ್ದೇಶಕ್ಕಾಗಿ ತಮ್ಮ ಪಿ. ಡಿ. ಲೆಕ್ಕದಿಂದ ಮುಂಗಡಗಳನ್ನು ಒದಗಿಸುವಂತೆ ಮತ್ತು ಸಗಟು ತಮ್ಮ ಚಿಲ್ಲರೆ ವಿತರಣೆಯ ಏಜೆನ್ಸಿಗಳು ತೃಪ್ತಿಕರವಾಗಿ ಕೆಲಸ ಮಾಡುವಂತೆ, ಮತ್ತು ಪರಿಹಾರ ಕಾಮಗಾರಿಗಳಲ್ಲಿ ನಿರತರಾದ ಕಾರ್ಮಿಕರಿಗೆ ಸಾಧ್ಯವಿದ್ದರೆ ಕೆಲಸ ನಡೆಯುವ ಸ್ಥಳಗಳಲ್ಲಿಯೇ, ಮಿಲೋ ದೊರೆಯುವಂತೆ ವ್ಯವಸ್ಥೆ ಮಾಡಲು ಡೆಪ್ಯುಟಿ ಕಮೀಷನರಿಗೆ ಪೂರ್ಣಾಧಿಕಾರವನ್ನು ನೀಡಲಾಗಿದೆ. ಮಿಲೋ ಧಾನ್ಯವನ್ನು ಚಿಲ್ಲರೆ ವಿತರಣೆಗಾಗಿ ಸಹಕಾರಿ ಸಂಘಕ್ಕೆ ಅಥವಾ ಏಜೆನ್ಸಿಗೆ ಕೊಡುವ ಮೊದಲು ಸಗಟು ವ್ಯಾಪಾರಿಯು ಅಥವಾ ತಾಲೂಕು ಮಾರುಕಟ್ಟೆ ಸಂಘಕ್ಕೆ ಅದನ್ನು ಸರಿಯಾಗಿ ಶುಚಿ ಮಾಡಲು ಏರ್ಪಾಡುಗಳನ್ನು ಮಾಡಲಾಗಿದೆ. ವಿಶ್ವ ಆಹಾರ ಮತ್ತು ಕೇರ್ ಕಾರ್ಯಕ್ರಮದ ಮೇರೆಗೆ ಸಾಧ್ಯವಿದ್ದ ಮಟ್ಟಿಗೂ ಕೆಲಸ ನಡೆಯುವ ಸ್ಥಳಗಳಲ್ಲಿಯೇ ಸ್ವಲ್ಪ ಗೋಧಿಯನ್ನು ಸಹ 1 ಕಿ. ಗ್ರಾಂ.ಗೆ 70 ಪೈಸೆಯಿಂದ 1 ರೂಪಾಯಿ ವರೆಗಿನ ದರದಲ್ಲಿ ಸರಬರಾಜು ಮಾಡಲಾಗುತ್ತಿದೆ.

8. ಬರುವ ಕೆಲವು ತಿಂಗಳುಗಳಲ್ಲಿ ಪರಿಹಾರ ಕಾಮಗಾರಿಗಳಿಗೆ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಕಾರ್ಮಿಕರು ಬೇಕಾಗಬಹುದೆಂದು ಸರ್ಕಾರಕ್ಕೆ ತಿಳಿದುಬಂದಿದೆ. ಮುಂಬರುವ ಮೂರು-ನಾಲ್ಕು ತಿಂಗಳುಗಳಲ್ಲಿ ಮುಂಗಾರು ಮಳೆ ಬೀಳುವವರೆಗೆ ನಾವು ಪ್ರತಿದಿನ ಸುಮಾರು 8 ಲಕ್ಷ ಜನರಿಗೆ ಉದ್ಯೋಗ ಒದಗಿಸಬೇಕಾಗುವುದು. ಅಂತೆಯೇ ನಾವು ಸಾಮಾನ್ಯ ಯೋಜನೆಯ ಮೇರೆಗೆ ನಿಗದಿ ಮಾಡುವ ಹಣಕ್ಕಿಂತ ಹೆಚ್ಚಾಗಿ 1977-78ರ ಬಜೆಟ್ಟಿನಲ್ಲಿ ಪರಿಹಾರ ಕಾರ್ಯಕ್ರಮಗಳಿಗೆ 7 ಕೋಟಿ ರೂಪಾಯಿಯ ವಿಶೇಷ ಏರ್ಪಾಟು ಮಾಡಿದ್ದೇವೆ. ಇದರಲ್ಲಿ, ಕೊರೆ ಬಾವಿಗಳ ಕಾರ್ಯಕ್ರಮಕ್ಕೆ 2 ಕೋಟಿ ರೂಪಾಯಿ ಮತ್ತು ಪರಿಹಾರ ಕಾಮಗಾರಿಗಳಿಗೆ ಅದರಲ್ಲಿಯೂ ವಿಶೇಷವಾಗಿ ಭೂಸಾರ ರಕ್ಷಣೆ ಕಾರ್ಯಕ್ಕೆ 5 ಕೋಟಿ ರೂಪಾಯಿ ವೆಚ್ಚ ಮಾಡಬಹುದಾಗಿದೆ.

9. ಕ್ಷಾಮಕಾಲದ ವಿಶೇಷ ಏರ್ಪಾಡಿನ ಜೊತೆಗೆ, ಉದ್ಯೋಗಾವಕಾಶ ಒದಗಿಸುವ ಅಭಿವೃದ್ಧಿ ಕಾಮಗಾರಿಗಳ ಯೋಜನಾ ಮತ್ತು ಯೋಜನೇತರ ಸಾಮಾನ್ಯ ಬಜೆಟ್ ಅಂದಾಜುಗಳು ಈ ಮುಂದಿನಂತಿವೆ : ಸಣ್ಣ ಪ್ರಮಾಣದ ನೀರಾವರಿಗೆ— 9 ಕೋಟಿ ರೂಪಾಯಿ, ಭೂಸಾರ ರಕ್ಷಣೆಗೆ—[illegible].01 ಕೋಟಿ ರೂಪಾಯಿ, ರಸ್ತೆ ಕಾಮಗಾರಿಗೆ—23 ಕೋಟಿ ರೂಪಾಯಿ, ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿಗೆ—70 ಕೋಟಿ ರೂಪಾಯಿ. ಮುಂಬರುವ ತಿಂಗಳುಗಳಲ್ಲಿ ಮುಂಗಾರು ಮಳೆ ಬೀಳುವ ವರೆಗೆ ಅಗತ್ಯವಾದಷ್ಟು ಉದ್ಯೋಗಾವಕಾಶ ಕಲ್ಪಿಸುವ ನಮ್ಮ ಮುಖ್ಯ ಉದ್ದೇಶಕ್ಕೆ ಅನುಗುಣವಾದ ರೀತಿಯಲ್ಲಿ ಮೇಲೆ ಹೇಳಿದ ಹಣವನ್ನು ಮತ್ತು ಇತರ ಯೋಜನಾ ಬಂಡವಾಳವನ್ನು ಬಿಡುಗಡೆ ಮಾಡಲಾಗುವುದು, ಮುಂಗಾರು ಮಳೆ ಬಿದ್ದೊಡನೆಯೇ ಮಾಮೂಲು ಕೃಷಿ ಕಾರ್ಯಗಳು ಆರಂಭವಾಗಿ ಪರಿಹಾರ ಕಾಮಗಾರಿಗಳಲ್ಲಿ ಈಗ ನಿರತರಾದ ಜನರಲ್ಲಿ ಬಹುಮಂದಿ ತಮ್ಮ ಕೃಷಿ ಕಾರ್ಯಕ್ಕೆ ಹಿಂದಿರುಗುವರೆಂದು ನಾವು ನಿರೀಕ್ಷಿಸುತ್ತೇವೆ. ಈ ಹಿಂದೆ 1972-73ರಲ್ಲಿ ಕ್ಷಾಮ ತಲೆದೋರಿದಾಗ ಕ್ಷಾಮಪೀಡಿತ ಪ್ರದೇಶಗಳಲ್ಲಿ ಜನರಿಗೆ ಉದ್ಯೋಗ ಒದಗಿಸುವ ಭರವಸೆಯನ್ನು ಸರ್ಕಾರದವರು ಸಂಪೂರ್ಣವಾಗಿ ಈಡೇರಿಸಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಸಾಕಷ್ಟು ಉದ್ಯೋಗ, ಆಹಾರಧಾನ್ಯ, ನೀರು ಪೂರೈಕೆ ಇವು ಮೂರು ಸರ್ಕಾರವು ಕೈಗೊಂಡ ಕ್ಷಾಮ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಮುಖ್ಯಾಂಶಗಳಾಗಿವೆ. ದನಗಳಿಗೆ ಮೇವನ್ನೂ ಕೂಡ ಸಾಧ್ಯವಿದ್ದಷ್ಟು ಮಟ್ಟಿಗೆ ಒದಗಿಸಲಾಗುತ್ತಿದೆ

10. ಗ್ರಾಮಾಂತರ ಪ್ರದೇಶಗಳಲ್ಲಿ ಬೆಲೆಗಳನ್ನು ನಿಯಂತ್ರಿಸಲು, ತೊಂದರೆಯನ್ನು ನಿವಾರಿಸಲು ಮತ್ತು ಅಭಿವೃದ್ಧಿಯನ್ನು ತೀವ್ರಗೊಳಿಸಲು, ಆಹಾರ ಧಾನ್ಯಗಳ ಕೇಂದ್ರ ದಾಸ್ತಾನುಗಳನ್ನು ಪೂರ್ಣವಾಗಿ ಬಳಸುವುದಕ್ಕಾಗಿ ಇನ್ನೂ ಯಾವ ಕ್ರಮಗಳನ್ನು ಕೈಗೊಳ್ಳಬಹುದೆಂದು ಭಾರತ ಸರ್ಕಾರದವರು ಸಹ ತೀವ್ರವಾಗಿ ಆಲೋಚನೆ ಮಾಡುತ್ತಿದ್ದರು. ಮಧ್ಯಮ ಮತ್ತು ಸಣ್ಣ ನೀರಾವರಿ, ಭೂಸಾರ ರಕ್ಷಣೆ, ವನ ನಿರ್ಮಾಣ ರಸ್ತೆ ಮತ್ತು ಪ್ರವಾಹ ನಿಯಂತ್ರಣ ಒಡ್ಡುಗಳು ಮುಂತಾದುವುಗಳಿಗೆ ಸಂಬಂಧಿಸಿದ ನಿರ್ವಹಣಾ ಕಾಮಗಾರಿಗಳಲ್ಲಿ ಗ್ರಾಮೀಣ ಜನತೆಗೆ ಉದ್ಯೋಗಾವಕಾಶ ಒದಗಿಸುವಲ್ಲಿ ರಾಜ್ಯ ಸರ್ಕಾರದವರ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡಲು ಹೆಚ್ಚಿನ ಪ್ರಮಾಣದಲ್ಲಿ ಗೋಧಿ ಮತ್ತು ಮಿಲೋಗಳನ್ನು ಉಚಿತವಾಗಿ ಪೂರೈಕೆ ಮಾಡುವ ಬಗ್ಗೆ ಒಂದು ಯೋಜನೆಯನ್ನು ಕುರಿತು ಈ ತಿಂಗಳ ಮೊದಲ ಭಾಗದಲ್ಲಿ ಭಾರತ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ತಿಳಿಸಿದ್ದರು. ಅಂಥ ಗ್ರಾಮೀಣ ನಿರ್ವಹಣಾ ಕಾಮಗಾರಿಗಳಲ್ಲಿ ತೊಡಗಿದ ಕೆಲಸಗಾರರಿಗೆ ಕೊಡತಕ್ಕ ಮಜೂರಿಯ ಬದಲಾಗಿ ಹಾಗೆ ಪೂರೈಕೆ ಮಾಡಿದ ಗೋಧಿ ಮತ್ತು ಮಿಲೋಗಳನ್ನು ಬಳಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತೆ ಮಾಡುವುದೇ ಈ ಯೋಜನೆಯ ಉದ್ದೇಶವಾಗಿದೆ. ಅಂಥ ಸಹಾಯವು ದೊರೆಯುವ ಸಂದರ್ಭದಲ್ಲಿ, ಬರುವ ವರ್ಷ ಹೆಚ್ಚಿನ ಉದ್ಯೋಗಾವಕಾಶವನ್ನು ಒದಗಿಸುವುದಕ್ಕೂ ಮತ್ತು ಅಂಥ ಕಾಮಗಾರಿಗಳ ಬಗ್ಗೆ ಲಭ್ಯವಿರುವ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೂ ಈ ಯೋಜನೆಯ ಪೂರ್ಣ ಲಾಭವನ್ನು ಎಷ್ಟರ ಮಟ್ಟಿಗೆ ಪಡೆದುಕೊಳ್ಳಬಹುದೆಂಬ ವಿಚಾರವಾಗಿ ರಾಜ್ಯ ಸರ್ಕಾರವು ಪರಿಶೀಲಿಸುವುದು. ಸಾಮಾಜಿಕ ನ್ಯಾಯದೊಂದಿಗೆ ನಮ್ಮ ಮುನ್ನಡೆಯನ್ನು ತೀವ್ರಗೊಳಿಸಲು ಭಾರತ ಸರ್ಕಾರದವರ ಬಳಿಯಿರುವ ವಿದೇಶ ವಿನಿಮಯ ಮೀಸಲುಗಳನ್ನು ಧೈರ್ಯದಿಂದ ಬಳಸಿಕೊಳ್ಳಬೇಕಾಗಿದೆ. ದೇಶವು ಹಣದುಬ್ಬರದ ಮೇಲೆ ಪಡೆದ ಹತೋಟಿಯನ್ನು ಸಡಿಲಿಸಕೂಡದು, ಅಷ್ಟೇ ಅಲ್ಲ, ಇನ್ನೂ ಬಿಗಿಗೊಳಿಸಬೇಕಾಗಿದೆ.

ಬೆಲೆಗಳು

11. ಬೆಲೆಗಳ ಪರಿಸ್ಥಿತಿಯನ್ನು ಸರಿಯಾಗಿ ನಿಯಂತ್ರಣದಲ್ಲಿಟ್ಟುಕೊಳ್ಳಲು ನಾವು ಸದಾ ಜಾಗರೂಕರಾಗಿರಬೇಕಾಗಿದೆ. ಸರ್ಕಾರದವರಲ್ಲಿ ಸಾಕಷ್ಟು ಆಹಾರ ಧಾನ್ಯ ದಾಸ್ತಾನು ಇರುವುದರಿಂದ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಸರಿಯಾಗಿರುವುದರಿಂದ, ಕ್ಷಾಮಪರಿಸ್ಥಿತಿಯು ತಲೆದೋರಿದಾಗಲೂ, ಅಕ್ಕಿ, ಜೋಳ ಮತ್ತು ರಾಗಿ ಮೊದಲಾದ ಅಗತ್ಯ ಆಹಾರ ಧಾನ್ಯಗಳ ಬೆಲೆಗಳು ಬಹು ಮಟ್ಟಿಗೆ ಸ್ಥಿಮಿತವಾಗಿ ಉಳಿದಿವೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಈಗಾಗಲೇ 13 ನಗರಗಳಲ್ಲಿ ಜಾರಿಯಲ್ಲಿದೆ ; 1977ರ ಏಪ್ರಿಲ್ ತಿಂಗಳ ಮೊದಲನೇ

ದಿನಾಂಕದಿಂದ ಇನ್ನೂ 11 ನಗರಗಳಲ್ಲಿ ಅನೌಪಚಾರಿಕ ಪಡಿತರ ಪದ್ಧತಿಯನ್ನು ಜಾರಿಗೆ ತರಲಾಗುವುದು. ಸರ್ಕಾರದವರ ಬಳಿ 2.90 ಲಕ್ಷ ಟನ್ನು ಆಹಾರ ಧಾನ್ಯಗಳ ದಾಸ್ತಾನು ಇದೆ. ಭಾರತ ಸರ್ಕಾರದವರು ಪ್ರತಿ ತಿಂಗಳು 20,000 ಟನ್ನು ಗೋಧಿ ಮತ್ತು 20 000 ಟನ್ನು ಮಿಲೋವನ್ನು ಸರಬರಾಜು ಮಾಡುತ್ತಿದ್ದಾರೆ. ಆದರೂ ಕೆಲವು ಅಗತ್ಯವಸ್ತುಗಳು ಅಂದರೆ, ಕಡಲೆಕಾಯಿ ಎಣ್ಣೆ ಮೊದಲಾದವುಗಳು ಬೆಲೆಗಳು ಏರಿವೆ. ಇದು ಇಡೀ ಭಾರತಕ್ಕೆ ಅನ್ವಯಿಸುವ ಪರಿಸ್ಥಿತಿಯಾಗಿದೆ. ವಿದೇಶಗಳಿಂದ ಖಾದ್ಯ ತೈಲಗಳನ್ನು ಆಮದು ಮಾಡಿಕೊಳ್ಳುವ ಮತ್ತು ರಾಜ್ಯಗಳಲ್ಲಿ ತೈಲ ಮತ್ತು ತೈಲ ಬೀಜಗಳ ಮುಕ್ತ ಸಾಗಣೆ ನಡೆಯುವ ಬಗ್ಗೆ ಭಾರತ ಸರ್ಕಾರದವರು ಈಗಾಗಲೇ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಕೊಂಡಿದ್ದಾರೆ. ಅಕ್ರಮ ದಾಸ್ತಾನುಗಾರರ ಮತ್ತು ಸಟ್ಟಾ ವ್ಯಾಪಾರಿಗಳ ಚಟುವಟಿಕೆಗಳನ್ನು ಬಹಳ ಎಚ್ಚರಿಕೆಯಿಂದ ಗಮನಿಸಿ ಅವಶ್ಯವಿದ್ದಲ್ಲಿ ಉಗ್ರಕ್ರಮ ಕೈಕೊಳ್ಳಬೇಕಾಗುವುದು. ಕಾಲಕ್ರಮದಲ್ಲಿ ಖಾದ್ಯ ತೈಲಗಳು ನಿರಂತರವಾಗಿ ಸರಬರಾಜಾಗುವಂತೆ ನೋಡಿಕೊಳ್ಳಲು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕಾಗುವುದು. ಬಳಕೆದಾರರ ಫೆಡರೇಷನ್ ಮುಂತಾದ ಸಹಕಾರಿ ಸಂಸ್ಥೆಗಳ ದ್ವಾರಾ ವಿತರಣೆಗಾಗಿ ಸಹಕಾರಿ ಕ್ಷೇತ್ರದಲ್ಲಿ ಕಡಲೇಕಾಯಿ ಎಣ್ಣೆ ಉತ್ಪಾದನೆ ಘಟಕಗಳನ್ನು ಸ್ಥಾಪಿಸುವ ಸಾಧ್ಯತೆಯನ್ನು ಕುರಿತು ಕರ್ನಾಟಕ ಸರ್ಕಾರದವರು ತೀವ್ರವಾಗಿ ಪರ್ಯಾಲೋಚಿಸುತ್ತಿದ್ದಾರೆ. ಇಂಥ ಘಟಕಗಳು ದುರ್ಬಲ ವರ್ಗದವರಿಗಾದರೂ ಯೋಗ್ಯ ಬೆಲೆಗೆ ಪದಾರ್ಥಗಳು ದೊರೆಯುವಂತೆ ನೋಡಿ ಕೊಳ್ಳಲು ಇನ್ನೂ ಹೆಚ್ಚಿನ ಪಾತ್ರ ವಹಿಸಬೇಕಾಗಿದೆ. ಇಂಥ ಒಂದು ನೀತಿಯನ್ನು ನಾವು ರಾಷ್ಟ್ರಮಟ್ಟದಲ್ಲಿ ಅನುಸರಿಸಿದ್ದಾದರೆ ಅದು ಖಾಸಗೀ ಕ್ಷೇತ್ರದ ಸಟ್ಟಾ ವ್ಯಾಪಾರಿಗಳ ಮೇಲೆ ಖಂಡಿತವಾಗಿಯೂ ಒಳ್ಳೆಯ ಪರಿಣಾಮ ಬೀರಬಹುದು.

೫ನೇ ಯೋಜನೆ

12. ಕರ್ನಾಟಕದ ಐದನೆಯ ಪಂಚವಾರ್ಷಿಕ ಯೋಜನೆಯು, ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಯೋಜನೆಗಳ 72 ಕೋಟಿ ರೂಪಾಯಿ ಬಂಡವಾಳ ವೆಚ್ಚವೂ ಇತರ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳ 200 ಕೋಟಿ ರೂಪಾಯಿ ಬಂಡವಾಳ ವೆಚ್ಚವೂ ಸೇರಿ ನಿಶ್ಚಿತವಾಗಿಯೂ 1,100 ಕೋಟಿ ರೂಪಾಯಿಗಿಂತ ಹೆಚ್ಚಿನ ಗಾತ್ರದ್ದಾಗಿರುವುದು. ವಿದ್ಯುಚ್ಛಕ್ತಿಗೆ 300 ಕೋಟಿ ರೂಪಾಯಿಗಿಂತ ಹೆಚ್ಚು, ಕೃಷಿ ಮತ್ತು ಸಹಕಾರಕ್ಕೆ 200 ಕೋಟಿ ರೂಪಾಯಿ ಸಾಮಾಜಿಕ ಮತ್ತು ಸಾಮುದಾಯಿಕ ಸೇವೆಗಳಿಗೆ 220 ಕೋಟಿ ರೂಪಾಯಿ, ಮತ್ತು ಉದ್ಯಮ, ಸಾರಿಗೆ ಮತ್ತು ಸಂಪರ್ಕ ಸಾಧನಗಳಿಗೆ 100 ಕೋಟಿ ರೂಪಾಯಿ. ಹೀಗೆ ಬಂಡವಾಳವನ್ನು ವಿನಿಯೋಗಿಸಲಾಗುವುದು.

13. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ದೇಶದ ಐದನೆಯ ಯೋಜನೆಗೆ ಒಪ್ಪಿಗೆ ನೀಡಿದೆ. ಕರ್ನಾಟಕದ ಐದನೆಯ ಯೋಜನೆಯು ಗಾತ್ರದಲ್ಲಿ ನಮ್ಮ ನಾಲ್ಕನೆಯ ಯೋಜನೆಯ ಎರಡೂವರೆ ಪಟ್ಟಿನಷ್ಟೂ ಮತ್ತು ಹಿಂದಿನ ಎಲ್ಲ ಪಂಚವಾರ್ಷಿಕ ಯೋಜನೆಗಳ ಒಟ್ಟು ಗಾತ್ರಕ್ಕಿಂತ ದೊಡ್ಡದೂ ಆಗಿರುವುದು. ನಾವು ಎರಡು ಸಲ ತೀವ್ರ ಅಭಾವ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದರೂ ಮತ್ತು 1972ರಲ್ಲಿ ಸುಮಾರು 71 ಕೋಟಿ ರೂಪಾಯಿಯ ಓವರ್‌ಡ್ರಾಫ್ಟಿನಿಂದ ನಾವು ಕಾರ್ಯಾರಂಭ ಮಾಡಬೇಕಾಗಿ ಬಂದರೂ ಇದು ಅಭಿವೃದ್ಧಿಯ ದಿಶೆಯಲ್ಲಿ ಮಹತ್ವದ ಮುನ್ನಡೆಯೇ ಸರಿ. ತಲಾ ಬಂಡವಾಳ ವೆಚ್ಚವೂ 1971-72ರಲ್ಲಿ 64 ರೂಪಾಯಿ ಇದ್ದುದು 1976-77ರಲ್ಲಿ 143 ರೂಪಾಯಿಗೇರಿತು ಮತ್ತು 1977-78ರಲ್ಲಿ 160 ರೂಪಾಯಿಗೇರುತ್ತದೆ.

14. ಸರಕಾರಿ ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚಿಸಲು ಸರಕಾರಕ್ಕೆ ಸಾಧ್ಯವಾಯಿತು ಈ ಹೊತ್ತು ಇಡೀ ದೇಶದಲ್ಲಿಯೇ ಕರ್ನಾಟಕದ ವೇತನ ಶ್ರೇಣಿಗಳು ಅತ್ಯಂತ ಪ್ರಗತಿಪರವಾಗಿವೆಯೆಂದು ಹೆಮ್ಮೆಪಟ್ಟುಕೊಳ್ಳಬಹುದಾಗಿದೆ. ದೇಶದಲ್ಲಿ ಆರ್ಥಿಕ ಸುಭದ್ರತೆಯಿದ್ದರೆ, ನಮ್ಮ 3.[illegible]0,000 ನೌಕರರಿಗೆ ನಿಗದಿಯಾದ ಉತ್ತೇಜಕ ವಾರ್ಷಿಕ ವೇತನ ಬಡತಿಗಳು ಅವರ ನಿಜವಾದ ಆದಾಯಕ್ಕೆ ಸುಭದ್ರ ರಕ್ಷಣೆ ಒದಗಿಸುವಂತಿದೆ. ಸ್ಥಳೀಯ ಸಂಸ್ಥೆಗಳಿಗೆ ಮತ್ತು ಸರ್ಕಾರಿ

ಸಹಾಯ ಪೋಷಿತ ಸಂಸ್ಥೆಗಳ ಮತ್ತು ಸರ್ಕಾರಿ ಸಹಾಯ ಪೋಷಿತ ಸಂಸ್ಥೆಗಳ 80,000 ನೌಕರರಿಗೂ ಮತ್ತು 71,000 ನಿವೃತ್ತಿ ವೇತನದಾರರಿಗೂ ಸಾಕಷ್ಟು ಅನುಕೂಲಗಳನ್ನು ಒದಗಿಸಿ ಕೊಡಲಾಗಿದೆ,

15. 4ನೇ ಯೋಜನೆಯ ಅಭಿವೃದ್ಧಿ ಬಂಡವಾಳವು 443 ಕೋಟಿ ರೂಪಾಯಿಗಳಷ್ಟಾಗಿತ್ತು, ಇದರಲ್ಲಿ ಯೋಜನೆಯ ಕೊನೆಯ ಎರಡು ವರ್ಷಗಳಲ್ಲಿ ಅಂದರೆ 1972-74ರ ಅವಧಿಯಲ್ಲಿ 201 ಕೋಟಿ ರೂಪಾಯಿ ವೆಚ್ಚ ಮಾಡಲಾಯಿತು. 5ನೇ ಯೋಜನೆಯ ಮೊದಲನೆಯ ಮೂರು ವರ್ಷಗಳಲ್ಲಿ ಅಭಿವೃದ್ಧಿ ವೆಚ್ಚವು 1976-77ರ ಕೊನೆಯ ವರೆಗೆ 559 ಕೋಟಿ ರೂಪಾಯಿಯಷ್ಟಾಗುವುದು, ಇದರಲ್ಲಿ ಕಾವೇರಿ ಯೋಜನೆಯ 33ಕೋಟಿ ರೂಪಾಯಿ ವೆಚ್ಚವೂ ಸೇರಿದೆ. ಯೋಜನೆಯ ಇನ್ನುಳಿದ ಎರಡು ವರ್ಷಗಳಿಗೆ ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳ 29 ಕೋಟಿ ರೂಪಾಯಿಗಳನ್ನು ಬಿಟ್ಟು ಯೋಜನಾ ಆಯೋಗದವರು ಕರ್ನಾಟಕಕ್ಕೆ 495 ಕೋಟಿ ರೂಪಾಯಿ ಬಂಡವಾಳ ಒದಗಿಸುವುದಾಗಿ ಸೂಚಿಸಿದ್ದಾರೆ. ದೆಹಲಿಯಲ್ಲಿ ಇತ್ತೀಚಿಗೆ ನಡೆದ ಮಾತುಕತೆಗಳಲ್ಲಿ ಭಾರತ ಸರಕಾರದವರು ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳಿಗೆ ಇನ್ನೂ 5 ಕೋಟಿ ರೂಪಾಯಿ ಬಂಡವಾಳವನ್ನು ಅಂದರೆ 1977—78ರ ಅವಧಿಯಲ್ಲಿ 14 ರಿಂದ 19 ಕೋ ರೂಪಾಯಿಗಳಷ್ಟು ಹೆಚ್ಚು ಬಂಡವಾಳವನ್ನು ಒದಗಿಸಲು ಒಪ್ಪಿದ್ದಾರೆ. ಇದೇ ರೀತಿಯಾಗಿ 1878 –79ರಲ್ಲಿಯೂ ಹೆಚ್ಚು ಬಂಡವಾಳ ದೊರೆಯಬಹುದೆಂದು ನಾನು ನಿರೀಕ್ಷಿಸುತ್ತೇನೆ. ಇದರಿಂದ ಮುಂಬರುವ ಎರಡು ವರ್ಷಗಳಲ್ಲಿ ಕಾವೇರಿ ಯೋಜನೆಗಳಿಗೆ 39 ಕೋಟಿ ರೂಪಾಯಿ ವೆಚ್ಚ ಮಾಡಲು ನಮಗೆ ಸಾಧ್ಯವಾಗುವುದು, 5ನೇ ಯೋಜನೆಯ ಒಟ್ಟು ಬಂಡವಾಳವು ಸುಮಾರು 1,120 ಕೋಟಿ ರೂಪಾಯಿ ಎಂದು ಗ್ರಹಿಸಿದರೆ 1977—78 ಮತ್ತು 1978-79ರಲ್ಲಿ ಒಟ್ಟು ಅಭಿವೃದ್ಧಿ ಬಂಡವಾಳವು 550 ರಿಂದ 560 ಕೋಟಿ ರೂಪಾಯಿಗಳಷ್ಟಾಗುವ ನಿರೀಕ್ಷೆ ಇದೆ. ಮುಂದಿನ ವರ್ಷ ಕ್ಷಾಮ ಪರಿಸ್ಥಿತಿಯ ಸಲುವಾಗಿ ಹಣ ಒದಗಿಸಿರುವುದೂ ಸಾಮಾಜಿಕ ಸೇವೆಗಳಿಗೆ ಅದರಲ್ಲಿಯೂ ವಿಶೇಷವಾಗಿ ಪೌಷ್ಟಿಕ ಆಹಾರ ಕಾರ್ಯಕ್ರಮಕ್ಕೆ ಮಹತ್ವ ನೀಡಿರುವುದೂ ಇದಕ್ಕೆ ಕಾರಣ. ರಾಜ್ಯದಲ್ಲಿ ಈಗಿರುವ ಕ್ಷಾಮ ಪರಿಸ್ಥಿತಿಯ ಬಗ್ಗೆ ನಾವು ಈಗಾಗಲೇ ಯೋಜನಾ ಆಯೋಗದವರಿಗೂ, ಭಾರತ ಸರ್ಕಾರದವರಿಗೂ ತಿಳಿಸಿದ್ದೇವೆ ಮತ್ತು ಅವರು ನಮಗೆ ತಕ್ಕ ಸಹಾಯ ನೀಡುವರೆಂದೂ ನಿರೀಕ್ಷಿಸಿದ್ದೇವೆ, ಕ್ಷಾಮ ಪರಿಸ್ಥಿತಿಯನ್ನು ಎದುರಿಸಲು ಅಗತ್ಯವಾಗಿ ಮಾಡಬೇಕಾದುದನ್ನೆಲ್ಲ ಮಾಡುವ ಮುಂಚೆಯೇ ನಾವು ಕೇಂದ್ರ ಸಹಾಯಕ್ಕಾಗಿ ಕಾಯುತ್ತಿಲ್ಲ. ಈ ಕಾರ್ಯಕ್ರಮವನ್ನು ಭಾರತ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವರೆಂಬ ಭರವಸೆ ನಮಗಿದೆ. ಇದರಿಂದ ಅಭಿವೃದ್ಧಿ ಕಾರ್ಯಕ್ರಮವು ಬಲಗೊಳ್ಳುವುದಲ್ಲದೆ ರಾಜ್ಯದಲ್ಲಿ ಭೀಕರ ಅಭಾವಕ್ಕೆ ತುತ್ತಾದ ಗ್ರಾಮಾಂತರ ಪ್ರದೇಶಗಳಲ್ಲಿ ಪೂರ್ವಭಾವೀ ಕಾರ್ಯಗಳನ್ನು ಕೈಕೊಳ್ಳಲು ಅನುಕೂಲವಾಗುವುದು,

ವಾರ್ಷಿಕ ಯೋಜನೆ ೧೯೭೭_೭೮

16. 1977-78ರ ಸಾಲಿನ ವಾರ್ಷಿಕ ಅಭಿವೃದ್ಧಿ ಬಂಡವಾಳವು 270 ಕೋಟಿ ರೂಪಾಯಿಗಳಷ್ಟಾಗಿದೆ. ಇದರಲ್ಲಿ ಪ್ರಸಕ್ತ ವರ್ಷದ ಸುಮಾರು 15.5 ಕೋಟಿ ರೂಪಾಯಿಗೆ ಹೋಲಿಸಲಾಗಿ ಕಾವೇರಿ ಯೋಜನೆಗಳ 19 ಕೋಟಿ ರೂಪಾಯಿಗಳ ಬಂಡವಾಳವೂ ಸೇರಿದೆ. ಕೃಷಿ ಮತ್ತು ಸಹಕಾರದ ಯೋಜನಾ ವೆಚ್ಚವು ಸುಮಾರು 44 ಕೋಟಿ ರೂಪಾಯಿಯಷ್ಟಾಗಿದೆ. ಕಾವೇರಿ ಯೋಜನೆಯನ್ನುಳಿದು ಭಾರಿ ಮತ್ತು ಮಧ್ಯಮ ನೀರಾವರಿ ಬಂಡವಾಳ ವೆಚ್ಚವು 48—28 ಕೋಟಿ ರೂಪಾಯಿಗಳಷ್ಟಾಗಿದೆ. ಪ್ರಸಕ್ತ ವರ್ಷ ಕಾವೇರಿ ಯೋಜನೆಯ ಬಂಡವಾಳವನ್ನು 14 ಕೋಟಿ ರೂಪಾಯಿಯಿಂದ 15—16 ಕೋಟಿ ರೂಪಾಯಿಗೆ ಏರಿಸಿರುವುದಕ್ಕೆ ಹೆಚ್ಚಿಗೆಯಾಗಿ ವಾಸ್ತವಿಕ ಬಂಡವಾಳವು 39—49 ಕೋಟಿ ರೂಪಾಯಿಗಳಷ್ಟಾಗಿತ್ತು. ಈ ಮೊತ್ತವೇ 1976—77ರ ಮೂಲ ವಾರ್ಷಿಕ ಯೋಜನಾ ಬಂಡವಾಳಕ್ಕಿಂತ 8 ಕೋಟಿ ರೂಪಾಯಿಯಷ್ಟು ಹೆಚ್ಚಾಗಿದೆ. ವಿದ್ಯುಚ್ಛಕ್ತಿಗೆ 75 ಕೋಟಿ ರೂಪಾಯಿ ಬಂಡವಾಳ ಒದಗಿಸಲಾಗಿದೆ. ಇದು ಪ್ರಸಕ್ತ ವರ್ಷದಲ್ಲಿ 64.5 ಕೋಟಿ ರೂಪಾಯಿಗಳಷ್ಟಾಗಿತ್ತು. ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚು ಮಹತ್ವ ನೀಡಿದಾಗಲೂ ಸಾಮಾಜಿಕ ಸೇವೆಗಳಿಗೆ 1976—77ರಲ್ಲಿ ಒದಗಿಸಿದ 53 ಕೋಟಿ ರೂಪಾಯಿಗಳ ಬಂಡವಾಳ ವೆಚ್ಚವನ್ನು, 1977—78ರಲ್ಲಿ 55 ಕೋಟಿ ರೂಪಾಯಿಗಳಿಗೇರಿಸಲು ನಾವು ಸಮರ್ಥರಾಗಿದ್ದೇವೆ.

17. 1977—78ರ ವಾರ್ಷಿಕ ಯೋಜನೆಯ ಕೆಲವೇ ಮುಖ್ಯಾಂಶಗಳನ್ನು ಇಲ್ಲಿ ಹೇಳುವುದಾದರೆ ಕೃಷ್ಣಾ ಮೇಲ್ದಂಡೆ ಯೋಜನೆಯ ಬಂಡವಾಳ ವೆಚ್ಚವನ್ನು 10 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆಯೆಂದು ಹೇಳಬಯಸುತ್ತೇನೆ. ಇದು ನಮ್ಮ ರಾಜ್ಯದ ಅತಿ ಮಹತ್ವದ ಯೋಜನೆಯಾಗಿದೆ. ಇದಕ್ಕೆ ಭಾರತ ಸರ್ಕಾರದವರಿಂದ ಮತ್ತು ವಿಶ್ವ ಬ್ಯಾಂಕಿನಿಂದ ಸಾಕಷ್ಟು ಸಹಾಯ ದೊರೆಯುವ ನಿರೀಕ್ಷೆ ಇದೆ. ವಸ್ತುತಃ ಈ ಯೋಜನೆಗೆ, ಜುಲೈ 1977 ರಿಂದ ಜೂನ್ 1981ರ ವರೆಗಿನ ಅವಧಿಯಲ್ಲಿ ಒಟ್ಟು 135—64 ಕೋಟಿ ರೂಪಾಯಿ ಬಂಡವಾಳ ಹಿಡಿಯುವುದೆಂದೂ ಈ ಯೋಜನೆಯಿಂದ ಸುಮಾರು 2.78 ಲಕ್ಷ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರೆಯುವುದೆಂದೂ ವಿಶ್ವಬ್ಯಾಂಕಿಗೆ ತಿಳಿಸಲಾಗಿದೆ. ಇದು ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೇ ಹಂತದ ಪ್ರಥಮ ಘಟ್ಟವಾಗಿದೆ. ಈ ಯೋಜನೆಗೆ ತಕ್ಕ ನೆರವು ದೊರೆಯುವುದೆಂದು ನಮಗೆ ಭರವಸೆ ಇದೆ.

18. 1977—78ರ ಸಾಲಿನ ವಿದ್ಯುಚ್ಛಕ್ತಿ ವೆಚ್ಚವು 75 ಕೋಟಿ ರೂಪಾಯಿ. ಈ ಪೈಕಿ ಉತ್ಪಾದನೆಗಾಗಿ 50 ಕೋಟಿ ರೂಪಾಯಿ ಮತ್ತು ರವಾನೆ ಮತ್ತು ವಿತರಣೆಗಾಗಿ 25 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. 1976—77ರಲ್ಲಿ ಕಾಳೀ ನದಿ ಯೋಜನೆಯ ವಾಸ್ತವಿಕ ವೆಚ್ಚವು ಸುಮಾರು 35 ಕೋಟಿ ರೂ.ಗಳೆರಿದು ಲೆಕ್ಕ ಹಾಕಲಾಗಿದೆ. ಮುಂದಿನ ವರ್ಷ, ರವಾನೆಗೆ 3.7 ಕೋಟಿ ರೂ. ಸೇರಿದಂತೆ ಈ ಯೋಜನೆಯ ವೆಚ್ಚವು ಸುಮಾರು 45 ಕೋಟಿ ರೂ.ಗಳಾಗುವುದು. ಮೊದಲನೆಯ ಯೋಜನೆಯ ಕೊನೆಯ ವರ್ಷದಲ್ಲಿ ಕಾಳೀನದಿ ಯೋಜನೆಯ ವೆಚ್ಚವು ಸುಮಾರು 50 ಕೋಟಿ ರೂ.ಗಳಾಗುವುದು. ವಾರಾಹೀ ಮತ್ತು ದೇಡ್ತಿ ಜಲ-ವಿದ್ಯುತ್ ಯೋಜನೆಗಳನ್ನು ಕೈಗೊಳ್ಳುವ ನಿರ್ಧಾರವನ್ನು ಸಹ ಮಾಡಿದ್ದೇವೆ. ಈ ಯೋಜನೆಗಳಿಗಾಗಿ 1977—78ರಲ್ಲಿ 8 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು, ಮುಂಬರುವ ವರ್ಷಗಳಲ್ಲಿ ಕಾಳೀನದಿ ಯೋಜನೆಯ ವೆಚ್ಚ ಕಡಿಮೆಯಾಗುತ್ತಾ ಹೋದಂತೆ ಈ ಯೋಜನೆಗಳಿಗೆ ಹೆಚ್ಚು ಹೆಚ್ಚು ಹಣ ಒದಗಿಸಲಾಗುವುದು.

ಪೌಷ್ಟಿಕ ಆಹಾರ ಕಾರ್ಯಕ್ರಮ

19. 1977—78ರಲ್ಲಿ ಸಮಾಜ ಸೇವೆಗಳ ಬಗ್ಗೆ ಮೀಸಲಾರಿಸಿದ 54—92 ಕೋಟಿ ರೂಪಾಯಿಗಳಲ್ಲಿ ಶಾಲಾ ಮಕ್ಕಳಿಗೆ ಮತ್ತು ಶಾಲಾಪೂರ್ವ ಮಕ್ಕಳಿಗೆ ಪೌಷ್ಟಿಕ ಆಹಾರ ಯೋಜನೆಯ 3—25 ಕೋಟಿ ರೂ.ಗಳೂ ಸೇರುತ್ತವೆ. ಅಂದರೆ ಈ ವರ್ಷಕ್ಕಿಂತ 1.5 ಕೋಟಿ ರೂ. ಹೆಚ್ಚು ಹಣ ಒದಗಿಸಲಾಗಿದೆ. ಈ ಯೋಜನೆಗೆ ಸರ್ಕಾರವು ಅತಿ ಹೆಚ್ಚಿನ ಮಹತ್ವವನ್ನು ನೀಡುತ್ತಲಿದೆ. ಏಕೆಂದರೆ ನಮ್ಮ ದೇಶದ ಮಕ್ಕಳನ್ನು ಅದರಲ್ಲೂ ಕಡುಬಡತನದಲ್ಲಿರುವ ಮಕ್ಕಳನ್ನು ಸರಿಯಾಗಿ ಪಾಲಿಸದಿದ್ದರೆ ನಮ್ಮ ದೇಶದ ಭವಿಷ್ಯವನ್ನು ಭದ್ರ ಹಾಗೂ ಹಿತಕರ ತಳಹದಿಯ ಮೇಲೆ ಕಟ್ಟುವುದು ಸಾಧ್ಯವಾಗಲಿಕ್ಕಿಲ್ಲ. ಚಿಕ್ಕ ವಯಸ್ಸಿನಲ್ಲಿ ಮಗುವಿಗೆ ಬೇಕಾದ ಕನಿಷ್ಠ ಪೌಷ್ಟಿಕಾಂಶವು ದೊರೆಯದಿದ್ದರೆ ಮಗುವಿನ ಬೆಳವಣಿಗೆ ಮತ್ತು ಅದರ ಭವಿಷ್ಯವು ತೀವ್ರ ಕುಂಠಿತವಾಗುವ ಸಂಭವವಿದೆ. ಈ ಮನವರಿಕೆ ಹಾಗೂ ಸವಾಲನ್ನೆದುರಿಸುವ ಸಾಮರ್ಥ್ಯದಲ್ಲಿ ನಮಗಿರುವ ಆತ್ಮವಿಶ್ವಾಸವೇ ಶಿಶು ಪೌಷ್ಟಿಕ ಆಹಾರಕ್ಕೆ ಹೆಚ್ಚಿನ ಹಣ ಒದಗಿಸುವಂತೆ ನಮ್ಮನ್ನು ಪ್ರೇರೇಪಿಸಿದೆ. ಮುಂಬರುವ ವರ್ಷಗಳಲ್ಲಿ ಈ ಯೋಜನೆಯು ಕಡುಬಡತನದಲ್ಲಿರುವ ಎಲ್ಲಾ ಶಾಲಾ ಮತ್ತು ಶಾಲಾಪೂರ್ವ ಮಕ್ಕಳನ್ನೂ ಒಳಗೊಳ್ಳುವ ಬೃಹತ್ ಯೋಜನೆಯಾಗಿ ಬೆಳೆಯುವುದೆಂದು ನಾವು ನಂಬಿದ್ದೇವೆ.

20. ಪ್ರಸ್ತುತ, ಮಧ್ಯಾಹ್ನ ಊಟ ಯೋಜನೆಯನ್ನು ಪೌಷ್ಟಿಕಾಂಶಗಳ ಅವಶ್ಯಕತೆಯಿರುವ 6 ರಿಂದ 12 ವರ್ಷದೊಳಗಿನ ಶಾಲಾ ಮಕ್ಕಳಿಗಷ್ಟೇ ವಿಸ್ತರಿಸಲಾಗಿದೆ. ಸಧ್ಯಕ್ಕೆ ಈ ಯೋಜನೆಯು 17 ಲಕ್ಷ ಮಕ್ಕಳನ್ನು ಒಳಗೊಂಡಿದೆ. ಇವರ ಪೈಕಿ 13 ಲಕ್ಷ ಮಕ್ಕಳಿಗೆ ಕೇರ್ ಸಂಸ್ಥೆಯ ನೆರವಿನಿಂದಲೂ 4 ಲಕ್ಷ ಮಕ್ಕಳಿಗೆ 9 ಜಿಲ್ಲೆಗಳಲ್ಲಿ ಮಧ್ಯಾಹ್ನ ಊಟದ ಯೋಜನೆಯ ಅಂಗವಾಗಿ ರಾಜ್ಯಸರ್ಕಾರವು ಒದಗಿಸುವ ಹೆಚ್ಚುವರಿಯಿಂದಲೂ ಆಹಾರವನ್ನೊದಗಿಸಲಾಗುತ್ತಿದೆ. ಅದಲ್ಲದೆ ಆಯ್ಕೆ ಮಾಡಲಾದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಶಾಲಾಪೂರ್ವ ಮಕ್ಕಳು, ಗರ್ಭಿಣಿಯರು ಹಾಗೂ ಹಾಲುಣಿಸುವ ತಾಯಂದಿರಿಗೆ ಪೌಷ್ಟಿಕಾಂಶಗಳ ಅವಶ್ಯಕತೆಯನ್ನು ಪೂರೈಸುವ ಉದ್ದೇಶವನ್ನು ಹೊಂದಿರುವ ವಿಶೇಷ ಪೌಷ್ಟಿಕ ಆಹಾರ ಯೋಜನೆ ಮತ್ತು ಸಮಗ್ರ ಶಿಶು ಕಲ್ಯಾಣ ಸೇವಾ ಯೋಜನೆಯನ್ನೂ ನಾವು ರೂಪಿಸಿಕೊಂಡಿದ್ದೇವೆ.

21. ಕೊಳಚೆ ಪ್ರದೇಶಗಳ ನಲುವಾಗಿರುವ ವಿಶೇಷ ಪೌಷ್ಟಿಕ ಆಹಾರ ಯೋಜನೆಯು ಪ್ರಸ್ತುತ ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಪ್ರಯೋಜನ ಒದಗಿಸಿದೆ. 1977—78ರಲ್ಲಿ ಈ ಯೋಜನೆಯ ಲಾಭವು 1.33 ಲಕ್ಷ ಜನಗಳಿಗೆ ದೊರೆಯುವಂತೆ ಅವನ್ನು ವಿಸ್ತರಿಸಲಾಗುವುದು ಮತ್ತು ರಾಜ್ಯದಲ್ಲಿನ 625 ಕೇಂದ್ರಗಳ ಮೂಲಕ ಇವರಿಗೆ ನೀಡಲಾಗುವ ಬ್ರೆಡ್ಡು ಮತ್ತು ಹಾಲಿನ ಪ್ರಮಾಣವನ್ನೂ ಹೆಚ್ಚಿಸಲಾಗುವುದು. 1977—78ರಲ್ಲಿ ಈ ಯೋಜನೆಗೆ ತಗಲುವ ವೆಚ್ಚ ಸುಮಾರು 1.60 ಕೋಟಿ ರೂಪಾಯಿ.

22. 6 ವರ್ಷದೊಳಗಿನ ಮಕ್ಕಳಿಗೆ ಪೌಷ್ಟಿಕಾಂಶಗಳ ಪೂರೈಕೆ ಮತ್ತು ಅವರ ಆರೋಗ್ಯ ಸ್ಥಿತಿಗಳನ್ನು ಸುಧಾರಿಸಬೇಕೆಂಬ ಉದ್ದೇಶವನ್ನು ಹೊಂದಿರುವ ಸಮಗ್ರ ಶಿಶು ಕಲ್ಯಾಣ ಸೇವಾ ಯೋಜನೆಯು ಗ್ರಾಮೀಣ ಪ್ರದೇಶಗಳಲ್ಲಿನ ಶಾಲಾ ಪೂರ್ವ ಮಕ್ಕಳ ಗರ್ಭಿಣಿಯರ ಹಾಗೂ ಹಾಲುಣಿಸುವ ತಾಯಂದಿರ ಅವಶ್ಯಕತೆಗಳನ್ನು ಪೂರೈಸುತ್ತದೆ ಮತ್ತು ಶಿಶುಗಳ ಸೂಕ್ತ ಬೆಳವಣಿಗೆಗೆ ಬೇಕಾದ ಸಹಾಯಕ ಕ್ರಮಗಳನ್ನೂ ಕೂಡ ಒದಗಿಸುತ್ತದೆ ಭಾರತ ಸರ್ಕಾರವು ರೂಪಿಸಿದ ಈ ಯೋಜನೆಯು 1975ರಲ್ಲಿ ಪ್ರಾರಂಭವಾಯಿತು ಮತ್ತು ಈಗ ಇದು ಮೂರು ಬ್ಲಾಕ್‌ಗಳಲ್ಲಿ ಕಾರ್ಯಗತವಾಗುತ್ತಿದೆ. 1977—78ರ ಸಾಲಿನಲ್ಲಿ ಈ ಯೋಜನೆಯನ್ನು ರಾಜ್ಯದ ಇನ್ನೂ 7 ಬ್ಲಾಕ್‌ಗಳಿಗೆ ವಿಸ್ತರಿಸುವ ಉದ್ದೇಶವಿದೆ. 1978—79ರ ಕೊನೆಯ ವೇಳೆಗೆ ರಾಜ್ಯದಲ್ಲಿನ ಪ್ರತಿಯೊಂದು ಜಿಲ್ಲೆಯೂ ಕೊನೆಯ ಪಕ್ಷ ಒಂದು ಅಂಥ ಬ್ಲಾಕನ್ನು ಹೊಂದುವ ನಿರೀಕ್ಷೆಯಿದೆ. ಕ್ರಮೇಣ ಇದನ್ನು ರಾಜ್ಯದ ಎಲ್ಲಾ ಬ್ಲಾಕುಗಳಿಗೂ ವಿಸ್ತರಿಸಲಾಗುವುದು. ಪ್ರತಿಯೊಂದು ಬ್ಲಾಕು ಸುಮಾರು 10 000 ಜನರಿಗೆ ಇದರ ಪ್ರಯೋಜನವನ್ನು ಒದಗಿಸುತ್ತದೆ. ಈ ಉದ್ದೇಶಕ್ಕಾಗಿ ಕೇರ್ ಸಂಸ್ಥೆಯಿಂದ ಬರುವ ಸಹಾಯವನ್ನು ಲೆಕ್ಕಕ್ಕೆ ತೆಗೆದುಕೊಂಡು ಈ ವರ್ಷ 40 ಲಕ್ಷ ರೂಪಾಯಿ ಒದಗಿಸಲಾಗಿದೆ.

23. ಹೀಗೆ ಪ್ರಸ್ತುತ ವರ್ಷದಲ್ಲಿ 18 ಲಕ್ಷ ಶಾಲಾ ಪೂರ್ವ ಮಕ್ಕಳು ಹಾಗೂ ಶಾಲಾ ಮಕ್ಕಳು ಪೌಷ್ಟಿಕ ಆಹಾರ ಕಾರ್ಯಕ್ರಮಗಳ ಪ್ರಯೋಜನ ಪಡೆಯುತ್ತಾರೆ. ಕೇರ್ ಸಂಸ್ಥೆಯ ಸಹಾಯವು ಕಡಿಮೆಯಾಗುತ್ತಿಲ್ಲ ಮತ್ತು ಮುಂದುವರಿಯುವುದು ಎಂದು ಭಾವಿಸಿ ಮಧ್ಯಾಹ್ನ ಊಟದ ಯೋಜನೆಗಾಗಿ 1977–78ನೇ ಸಾಲಿನಲ್ಲಿ 5 ಕೋಟಿ ರೂಪಾಯಿ ಮೊತ್ತವನ್ನು ಒದಗಿಸಲಾಗಿದೆ. ಇದರಿಂದಾಗಿ ಈ ಯೋಜನೆಗಾಗಿ ಇನ್ನೂ 23 ಲಕ್ಷ ಮಕ್ಕಳಿಗೆ ವಿಸ್ತರಿಸುವುದು 5 ಕೋಟಿ ರೂಪಾಯಿ ವೆಚ್ಚದ ಪೈಕಿ 75 ಲಕ್ಷ ರೂಪಾಯಿಗಳನ್ನು ಮೈಸೂರು, ಚಿತ್ರದುರ್ಗ, ಬೆಳಗಾಂವಿ. ರಾಯಚೂರು ಮತ್ತು ಬಳ್ಳಾರಿಗಳಲ್ಲಿ ಶಕ್ತಿವರ್ಧಕ ಆಹಾರದ ತಯಾರಿಕೆಗಾಗಿ ಐದು ಘಟಕಗಳನ್ನು ಸ್ಥಾಪಿಸಲು ವಿನಿಯೋಗಿಸಲಾಗುವುದು, ಪ್ರತಿ ಘಟಕವು 6 ಟನ್ನು ಶಕ್ತಿವರ್ಧಕ ಆಹಾರ ಉತ್ಪಾದನ ಸಾಮರ್ಥ್ಯವನ್ನು ಪಡೆದಿರುತ್ತದೆ ಮತ್ತು 200 ಕೆಲಸದ ದಿನಗಳಲ್ಲಿ ಎರಡು ಸರದಿಗಳ ಪ್ರಕಾರ ಒಂದು ವರ್ಷಕ್ಕೆ 2,400 ಟನ್ನುಗಳಷ್ಟು ಶಕ್ತಿವರ್ಧಕ ಆಹಾರವನ್ನು ಉತ್ಪಾದಿಸಲಾಗುವುದು. ಸುಲಭವಾಗಿ ದೊರಕುವ ಗೋಧಿ, ಬೇಳೆ, ಕಡಲೆಕಾಯಿ, ಬೆಲ್ಲ ಮುಂತಾದ ಕಚ್ಚಾ ಪದಾರ್ಥಗಳಲ್ಲಿ ಇರುವ ಮತ್ತು ಪ್ರೋಟೀನು, ವಿಟಮಿನು ಮತ್ತು ಇತರ ಪೌಷ್ಟಿಕಾಂಶಗಳನ್ನು ಈ ಶಕ್ತಿವರ್ಧಕ ಆಹಾರವು ಸೂಕ್ತ ಪ್ರಮಾಣದಲ್ಲಿ ಒದಗಿಸುತ್ತದೆ. ಒಂದು ದಿನಕ್ಕೆ ಒಂದು ಮಗುವಿಗೆ 100 ಗ್ರಾಂ ಶಕ್ತಿವರ್ಧಕ ಆಹಾರದಂತೆ 200 ದಿನಗಳಿಗೆ ಒಂದು ಘಟಕವು 1,20,000 ಮಕ್ಕಳಿಗೆ ಆಹಾರವನ್ನು ಒದಗಿಸಬಲ್ಲದು. ಐದು ಘಟಕಗಳು 6,00,000 ಮಕ್ಕಳಿಗೆ ಆಹಾರವನ್ನು ಒದಗಿಸಬಲ್ಲವು. ಒಂದು ಮಗುವಿಗೆ ಒಂದು ದಿನಕ್ಕೆ ಸುಮಾರು 50 ಪೈಸೆ ವೆಚ್ಚವಾದರೆ 200 ದಿನಗಳ 1 ವರ್ಷಕ್ಕೆ ಸುಮಾರು 100 ರೂಪಾಯಿ ವೆಚ್ಚವಾಗುತ್ತದೆ. ಕರ್ನಾಟಕ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನ ಪರಿಷತ್ತು ಮೈಸೂರಿನ ಕೇಂದ್ರ ಆಹಾರ ಮತ್ತು ತಾಂತ್ರಿಕ ಸಂಶೋಧನಾ ಸಂಸ್ಥೆಯ ಸಹಕಾರದೊಂದಿಗೆ ಈ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿತ್ತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು, ಈಗ ಪರಿಷತ್ತು ತಯಾರಿಸಿದ ಪ್ರಾಜೆಕ್ಟ್ ವರದಿಯು ಕಾರ್ಯಗತಗೊಳಿಸಲು ಸಿದ್ಧವಾಗಿದೆ. ಇದು ಸ್ಥಳೀಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಶಕ್ತಿವರ್ಧಕ ಆಹಾರವನ್ನು ಉತ್ಪಾದಿಸುವುದಕ್ಕಾಗಿ ಆಂತರಿಕ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸಲು ನಾವು ಇಟ್ಟಿರುವ ಪ್ರಮುಖ ಹೆಜ್ಜೆ: ಹೀಗೆ ಸ್ವಾವಲಂಬನೆಯ ಆಧಾರದ ಮೇಲೆ ಮುಂಬರುವ ವರ್ಷಗಳಲ್ಲಿ ಈ ಯೋಜನೆಯನ್ನು ವಿಸ್ತರಿಸಬಹುದು.

24. ಆರನೇ ಯೋಜನೆಯ ಅವಧಿಯಲ್ಲಿ ಕಡುಬಡತನದ ವರ್ಗಕ್ಕೆ ಸೇರಿರುವ ಎಲ್ಲ ಮಕ್ಕಳಿಗಾಗಿ ಒಂದು ನೈಜ ಯೋಜನೆಯನ್ನು ರೂಪಿಸಿದ್ದೇವೆ. ಇದು ರಾಜ್ಯದಲ್ಲಿನ ಶಾಲಾಪೂರ್ವ ಮಕ್ಕಳಿಗೂ ಶಾಲಾ ಮಕ್ಕಳಿಗೂ ಪೌಷ್ಟಿಕ ಆಹಾರ ಒದಗಿಸುವ ಕಾರ್ಯಕ್ರಮವಾಗಿದೆ. ಇದನ್ನು ವಿವಿಧ ಹಂತಗಳಲ್ಲಿ ಕಾರ್ಯಗತಗೊಳಿಸಲಾಗುವುದು. ಇದು ಪೌಷ್ಟಿಕ ಆಹಾರ ಮತ್ತು ಆರೋಗ್ಯದ ಸಮಗ್ರ ಯೋಜನೆಯಾಗಿದೆ. ಈ ಕಾರ್ಯಕ್ರಮದಲ್ಲಿ ಶಕ್ತಿವರ್ಧಕ ಆಹಾರವನ್ನು ಒದಗಿಸುವುದೇ ಅಲ್ಲದೆ ಆರೋಗ್ಯ ಪರೀಕ್ಷೆಗಳನ್ನು ಏರ್ಪಡಿಸಲಾಗುವುದು. ಮುಖ್ಯವಾಗಿ ಬಡವರನ್ನು ಮತ್ತು ಪೌಷ್ಟಿಕ ಆಹಾರದ ಕೊರತೆಯಿಂದ ಬಳಲುತ್ತಿರುವವರನ್ನೂ ಗಮನದಲ್ಲಿರಿಸಿಕೊಂಡು ಇದನ್ನು ರೂಪಿಸಲಾಗಿದೆ. ವಾಸ್ತವವಾಗಿ, ಪೌಷ್ಟಿಕ ಆಹಾರದ ತೀವ್ರ ಕೊರತೆಯಿಂದ ಬಳಲುವವರಿಗೆ ಅವಶ್ಯವಾದ ವೈದ್ಯಕೀಯ ಸಹಾಯ ಒದಗಿಸುವುದಲ್ಲದೆ ಹೆಚ್ಚಿನ ಆಹಾರವನ್ನೂ ಕೊಡಬಹುದು. ಪೌಷ್ಟಿಕ ಆಹಾರ ಮತ್ತು ಆರೋಗ್ಯಕ್ಕೆ ನಿಕಟವಾಗಿ ಸಂಬಂಧಪಟ್ಟಂತೆ ಮಕ್ಕಳಿಗೆ ಸೋಂಕು ತಟ್ಟದಂತೆ ರಕ್ಷಣೆ ಒದಗಿಸುವುದೇ ಮುಂತಾದ ಅವಶ್ಯ ಸೇವೆಗಳನ್ನು ಈ ಯೋಜನೆಯಲ್ಲಿ ಸೇರಿಸಲಾಗಿದೆ. ಪೌಷ್ಟಿಕ ಆಹಾರೋಪಚಾರ ವಿಷಯಗಳೂ ಸೂಕ್ತವಾದ ಪ್ರಾಮುಖ್ಯತೆ ಒದಗಿಸುವಂತೆ ಅಗತ್ಯ ಹಣವನ್ನು ಈ ಕಾರ್ಯಕ್ರಮದಲ್ಲಿಯೇ ಸೇರಿಸಿಕೊಳ್ಳಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಕಾರ್ಯಕ್ರಮವು ಶಿಶುಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಕ್ರಮವಾಗಬೇಕು—ಮಕ್ಕಳ ಸರ್ವಾಂಗೀಣ ಆರೋಗ್ಯ ಕಾರ್ಯಕ್ರಮವು ಆಗಬೇಕು. ಇದೊಂದು ಮಹತ್ವದ ಕಾರ್ಯ. ಆದರೂ ಮುಂದಿನ ವರ್ಷದಿಂದ ಈ ನೀತಿಗಳನ್ನು ಅಳವಡಿಸಿ, ಅದನ್ನು ಕಾರ್ಯ ರೂಪದಲ್ಲಿ ತರಲು ನಿರ್ಧರಿಸಿದ್ದೇವೆ.

25. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 15ರಷ್ಟು ಶಾಲಾಪೂರ್ವ ಮಕ್ಕಳೂ ಮತ್ತು 5 ರಷ್ಟು ಹಾಲುಣಿಸುವ ತಾಯಂದಿರೂ ಇದ್ದಾರೆ, ಈ ಗುಂಪಿನ ಪೈಕಿ ಕಡುಬಡತನದ ವರ್ಗಕ್ಕೆ ಸೇರುವ ಶೇಕಡಾ 40ರಷ್ಟು ಜನಗಳಿಗೆ ಆಹಾರ ಒದಗಿಸುವುದು ಪರ್ಯಾಪ್ತವೆಂದ ಭಾವಿಸಿದರೂ, ಬೆಳೆಯುತ್ತಿರುವ ಜನಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡು, 1983—84ರ ವೇಳೆಗೆ 23 ಲಕ್ಷ ಶಾಲಾಪೂರ್ವ ಮಕ್ಕಳಿಗೂ ಮತ್ತು 3.5 ಲಕ್ಷಕ್ಕೂ ಹೆಚ್ಚು ತಾಯಂದಿರಿಗೂ ಆಹಾರವನ್ನೂ ಒದಗಿಸಬೇಕಾಗುವುದು. ಎಂದರೆ 1977—78ರಲ್ಲಿ 2.33 ಲಕ್ಷ ಜನರಿಗೆ ಸಹಾಯ ಒದಗಿಸುತ್ತಿರುವ ಈ ಸಮಗ್ರ ಶಿಶು ಕಲ್ಯಾಣ ಸೇವಾ ಯೋಜನೆಯನ್ನು 1983—84ರಲ್ಲಿ 27 ಲಕ್ಷ ಜನರಿಗೆ ವಿಸ್ತರಿಸಬೇಕಾಗುವುದು. ಪ್ರಸ್ತುತ ಆಧಾರದ ಮೇಲೆ 1977—78ರಲ್ಲಿರುವ 2 ಕೋಟಿ ರೂಪಾಯಿ ವೆಚ್ಚವನ್ನು 1983—84ರಲ್ಲಿ 17 ಕೋಟಿ ರೂಪಾಯಿಗೆ ಹೆಚ್ಚಿಸಬೇಕಾಗುವುದು. ಇದೇ ರೀತಿ 1977–78ರಲ್ಲಿ ಸುಮಾರು 19 ಲಕ್ಷ ಶಾಲಾ ಮಕ್ಕಳಿಗೆ ದೊರಕುತ್ತಿರುವ ಈ ಸೌಲಭ್ಯವನ್ನು 1983–84ರ ವೇಳೆಗೆ ಒಟ್ಟು 30 ಲಕ್ಷ ಶಾಲಾ ಮಕ್ಕಳಿಗೆ ಒದಗಿಸಬೇಕಾಗಿದೆ. ಇದಕ್ಕೆ 30 ಕೋಟಿ ರೂಪಾಯಿ ವೆಚ್ಚ ತಗಲುವುದು. ಈ ಯೋಜನೆಯ ಮೇರೆಗೆ ವರ್ಷವೊಂದಕ್ಕೆ ಸರಾಸರಿ ಪ್ರತಿ ಮಗುವಿಗೆ ತಲಾ 100 ರೂಪಾಯಿ ವೆಚ್ಚ ತಗಲುತ್ತದೆ, ಮಕ್ಕಳ ಅಭಿವೃದ್ಧಿಯ ಈ ಕಾರ್ಯ ಹಣ ಒದಗಿಸಲು ಈ ದಿಶೆಯಲ್ಲಿ ವಿವಿಧ ಮಾರ್ಗಗಳನ್ನು ಹುಡುಕಬೇಕಾಗುವುದು. ನಮ್ಮ ಸಾಧನೆಯು ಸ್ಥಳೀಯ ಸಂಪನ್ಮೂಲಗಳ ಪರಮಾವಧಿ ಬಳಕೆಯನ್ನೂ ಭಾರತ ಸರ್ಕಾರದ ಸ್ವಯಂ ಸೇವಾ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಂದ ನಾವು ಪಡೆಯಬಹುದಾದ ನೆರವಿನ ಮೊತ್ತವನ್ನೂ ಅವಲಂಬಿಸಿದೆ. ಮಕ್ಕಳ ಕಲ್ಯಾಣಕ್ಕಾಗಿ ಇಂಥ ಒಂದು ಸಮಗ್ರ ಯೋಜನೆಯನ್ನು ಪ್ರಾರಂಭಿಸಲು ಇದೀಗ ಸೂಕ್ತ ಸಮಯವೆಂದು ನನಗೆ ಮನದಟ್ಟಾಗಿದೆ. 1977...78ರ ಸಾಲಿನ ಬಜೆಟ್ಟಿನಲ್ಲಿ 8 25 ಕೋಟಿ ರೂಪಾಯಿ ಒದಗಿಸಿ ಈ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಆರನೇ ಪಂಚವಾರ್ಷಿಕ ಯೋಜನೆಯು ಮುಗಿಯುವ ವೇಳೆಗೆ ಈ ದಿಶೆಯಲ್ಲಿ ನಾವು ಗಣನೀಯ ಪ್ರಗತಿ ಸಾಧಿಸಬಹುದೆಂಬ ಆಶಾಭಾವನೆ ನನಗಿದೆ. ಮಿತ ಸಂತಾನ ಮತ್ತು ಮಕ್ಕಳ ಸೂಕ್ತ ಪಾಲನೆ—ಇವುಗಳ ಬಗ್ಗೆ ರೂಪಿಸಲಾದ ಸ್ವಯಂ ಪ್ರೇರಣಾ ಕುಟುಂಬ ಯೋಜನೆಯು ಈ ಕಾರ್ಯಕ್ರಮದಿಂದ ಬಲಗೊಳ್ಳುವದೆಂಬ ವಿಚಾರದಲ್ಲಿ ಸಂದೇಹವಿಲ್ಲ. ಈ ಕಾರ್ಯಕ್ರಮವನ್ನೂ ಜಾರಿಗೊಳಿಸಿದರೆ, ಅಪವ್ಯಯವನ್ನು ವಿದ್ಯಾಭ್ಯಾಸವನ್ನು ನಡುವೆಯೇ ಬಿಟ್ಟು ಬರುವುದನ್ನೂ ತಡೆಗಟ್ಟಿದಂತಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣವು ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ಅಂಗವಿಕಲರಿಗೆ ಸಹಾಯ

26. ಸಂಪಾದನೆ ಮಾಡಲಾಗಿದೆ ನಾನಾ ಕಷ್ಟಕಾರ್ಪಣ್ಯ ಅನುಭವಿಸುತ್ತಿರುವ ಅಂಗವಿಕಲರಿಗೆ ಮತ್ತು ಅಶಕ್ತರಾದ ಬಡವರಿಗೆ ಹೆಚ್ಚಿಗೆ ಗಮನ ಕೊಡುವಂತೆ ವೃದ್ಧಾಪ್ಯವೇತನ ಯೋಜನೆಯನ್ನು ಉದಾರಗೊಳಿಸಲು ಮತ್ತು ಪೂರಕಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದೇವೆ ಸಧ್ಯದಲ್ಲಿ 65 ವರ್ಷಕ್ಕೂ ಮೇಲ್ಪಟ್ಟ ನಿರ್ಗತಿಕರಿಗೆ ತಿಂಗಳೊಂದಕ್ಕೆ ತಲಾ 40 ರೂಪಾಯಿಗಳನ್ನು ವೃದ್ಧಾಪ್ಯವೇತನವನ್ನು ಕೊಡಲಾಗುತ್ತಿದೆ ಕುಷ್ಠರೋಗ, ಹುಚ್ಚು ಮತ್ತು ಅಂಥ ಇತರ ಕಾಯಿಲೆಗಳ ಕಾರಣ ದುರ್ಬಲರಾಗಿ ಜೀವನ ನಡೆಸಲಾರದ ವ್ಯಕ್ತಿಗಳ ಸಂದರ್ಭದಲ್ಲಿ 60 ವರ್ಷದ ವಯೋಮಿತಿ ನಿಗದಿಪಡಿಸಲಾಗಿದೆ. ಕುರುಡರು ಅಥವಾ ಒಂದು ಇಲ್ಲವೆ ಹೆಚ್ಚು ಅವಯವಗಳನ್ನು ಕಳೆದುಕೊಂಡವರ ವಿಷಯದಲ್ಲಿ ಈ ವಯೋಮಿತಿ 45 ವರ್ಷ ಇಂದು ನಮ್ಮ ರಾಜ್ಯದಲ್ಲಿ ಈ ರೀತಿ ವೃದ್ಧಾಪ್ಯ ವೇತನ ಪಡೆಯುತ್ತಿರುವವರ ಸಂಖ್ಯೆ 1 60 ಲಕ್ಷ ಈ ಬಗ್ಗೆ ವರ್ಷವೊಂದಕ್ಕೆ 6.50 ಕೋಟಿ ರೂಪಾಯಿ ವೆಚ್ಚವಾಗುತ್ತದೆ ಆದರೆ ನಮ್ಮ ರಾಜ್ಯದಲ್ಲಿ ಈ ರೀತಿ ಸಂಪಾದನೆ ಮಾಡಲಾಗಿದೆ. ತುರ್ತು ನೆರವಿನ ಅಗತ್ಯವಿರುವ ಇನ್ನೂ ಅನೇಕ ನಿರ್ಗತಿಕರಿದ್ದು ಅವರೆಲ್ಲರಿಗೂ ಈ ಸೌಲಭ್ಯವನ್ನು ಒದಗಿಸುವುದು ಸಾಧ್ಯವಾಗಿಲ್ಲವೆಂಬ ಅರಿವು ಸರ್ಕಾರಕ್ಕಿದೆ. ಕಡುಬಡವರಿಗೂ ಮತ್ತು ಒಂದು ನಿರ್ದಿಷ್ಟ ಆದಾಯ ಮಿತಿಯೊಳಗಿರುವವರಿಗೂ ಒಂದಲ್ಲ ಒಂದು ರೀತಿಯಲ್ಲಿ ಸಹಾಯ ಮಾಡುವುದೇ ಸರ್ಕಾರದ ಉದ್ದೇಶ. ಅಂಗವಿಕಲರಿಗೆ ಕೃತಕ ಅವಯವಗಳು, ಯಾಂತ್ರಿಕ ಸಾಧನ ಸಲಕರಣೆ ಮತ್ತು ಉಪಕರಣಗಳೇ ಮುಂತಾದುವುಗಳನ್ನು ಒದಗಿಸುವುದಕ್ಕಾಗಿ ಬಜೆಟ್ಟಿನಲ್ಲಿ 25 ಲಕ್ಷ ರೂಪಾಯಿ ಒದಗಿಸಿದ್ದೇನೆ. ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಗೊಳಿಸಲಾಗುವುದು. ಇಂಥ ಸಹಾಯದಿಂದ ಸಮಸ್ಯೆ ಪರಿಹಾರವಾಗದಿದ್ದ ಸಂದರ್ಭಗಳಲ್ಲಿ ಅಂಥವರಿಗೆ ವಯೋಮಿತಿಯನ್ನು ಗಣಿಸದೆ 40 ರೂಪಾಯಿ ವೃದ್ಧಾಪ್ಯ ವೇತನವನ್ನು ಕೊಡಲಾಗುವುದು. ಆದರೆ ಈ ಸೌಲಭ್ಯವು ಯಾವುದೇ ರೀತಿಯ ಆದಾಯವಿಲ್ಲದವರಿಗೆ ಮತ್ತು ಕಡುಬಡವರಿಗೆ ಅಥವಾ ಒಂದು ನಿರ್ದಿಷ್ಟ ಆದಾಯಮಿತಿಯೊಳಗಿರುವವರಿಗೂ ಮಾತ್ರ ಅನ್ವಯಿಸುತ್ತದೆ.

ಗ್ರಾಮೀಣ ಮನೆ ನಿವೇಶನಗಳು ಮತ್ತು ಜನತಾ ಗೃಹನಿರ್ಮಾಣ ಕಾರ್ಯಕ್ರಮ

27. ಗ್ರಾಮಾಂತರ ನಿವೇಶನಗಳಿಗೆ ಮತ್ತು ಜನತಾ ಗೃಹನಿರ್ಮಾಣ ಯೋಜನೆಗೆ ಬಜೆಟಿನಲ್ಲಿ 7.5 ಕೋಟಿ ರೂಪಾಯಿ ಒದಗಿಸಲಾಗಿದೆ. ನಿವೇಶನರಹಿತ ಬಡವರಿಗೆ ಉಚಿತ ನಿವೇಶನ ಒದಗಿಸುವ ಯೋಜನೆಯು ಈಗ ಪೂರ್ಣವಾಗಿದೆಯೆಂದೇ ಹೇಳಬಹುದು. 1977ರ ಜನವರಿ 31ರ ವೇಳೆಗೆ 7,35 ಲಕ್ಷ ನಿವೇಶನಗಳನ್ನು ಹಂಚಲಾಗಿದೆ. ಇವುಗಳಲ್ಲಿ ಹರಿಜನ ಗಿರಿಜನರಿಗೆ ಸುಮಾರು 2.75 ಲಕ್ಷ ನಿವೇಶನಗಳನ್ನು ಒದಗಿಸಲಾಗಿದೆ. ನಿವೇಶನ ರಹಿತ ಬಡವರು ಇನ್ನೂ ಇದ್ದಾರೆಂದು ಗಮನಕ್ಕೆ ಬಂದರೆ ಅವರಿಗೂ ನಿವೇಶನಗಳನ್ನು ಉಚಿತವಾಗಿ ಕೊಡಲಾಗುವುದು. ರಾಜ್ಯದಲ್ಲಿ ತಲಾ 2 600 ರೂಪಾಯಿ ಖರ್ಚಿನಲ್ಲಿ 74,965 ಮನೆಗಳನ್ನು ಕಟ್ಟಲಾರಂಭಿಸಿದ್ದು. ಆ ಪೈಕಿ 47.594 ಮನೆಗಳನ್ನು 1977ರ ಜನವರಿ 31ರ ವೇಳೆಗೆ ಪೂರ್ಣಗೊಳಿಸಲಾಗಿದೆ. ಇನ್ನುಳಿದ ಮನೆಗಳ ಪೈಕಿ 26.275 ಮನೆಗಳ ನಿರ್ಮಾಣ ಕಾರ್ಯವನ್ನು ಮೂರನೇ ಮತ್ತು ನಾಲ್ಕನೇ ಸರಣಿಗಳಲ್ಲಿ ಪ್ರಾರಂಭಿಸಲಾಗಿತ್ತು ; ಈ ಕಾಮಗಾರಿಯು ಮುಂದಿನ ವರ್ಷ ಪೂರ್ಣವಾಗಲಿದೆ. ಇದಲ್ಲದೆ ಪ್ರಸಕ್ತ ವರ್ಷ. ಪ್ರಯೋಗ ದೃಷ್ಟಿಯಿಂದ ಕಡಿಮೆ ವೆಚ್ಚದ ಅಂದರೆ, ತಲಾ 1.250 ರೂಪಾಯಿ ವೆಚ್ಚದ 8,750 ಮನೆಗಳ ನಿರ್ಮಾಣ ಕಾರ್ಯವನ್ನು ಮಂಜೂರು ಮಾಡಲಾಗಿದೆ. ಕೆಲವು ಜನರು ತಾವೇ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಇಷ್ಟಪಟ್ಟರೆ, ಆ ಬಗ್ಗೆ 250 ರೂಪಾಯಿ ಬೆಲೆ ಬಾಳುವ ಸಾಮಾಗ್ರಿಗಳನ್ನು ಕೊಡಲಾಗುವುದೆಂದು ತಿಳಿಸಲಾಗಿದೆ ಈಗಾಗಲೇ ಈ ಆಧಾರದ ಮೇಲೆ ಕೆಲವು ಗುಡಿಸಲುಗಳನ್ನು ನಿರ್ಮಿಸಲಾಗಿದೆ. 1977—78ನೇ ಸಾಲಿನಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಗ್ರಾಮೀಣ ಗೃಹನಿರ್ಮಾಣದ ಉದ್ದೇಶಕ್ಕಾಗಿ ಕೊಟ್ಟಿರುವ ಹಣವನ್ನು ಸ್ಥಳೀಯರ ಅಯ್ಕೆಗನುಸಾರವಾಗಿ ಈ ಮೂರು ಬಗೆಯ ನಿರ್ಮಾಣಗಳಲ್ಲಿ ಯಾವುದನ್ನಾದರೂ ಕೈಕೊಳ್ಳಲು ಬಳಸಿಕೊಳ್ಳಬಹುದು. ಈ ಗುಡಿಸಲು ಯೋಜನೆಯಿಂದಾಗಿ ಅನೇಕ ಜನರು ತಮಗೆ ಕೊಟ್ಟ ಗೃಹನಿವೇಶನದಲ್ಲಿ ಒಂದು ಜೋಪಡಿ ಹಾಕಿಕೊಳ್ಳಬಹುದು. 1,250 ರೂ.ಗಳ ವೆಚ್ಚದ ಗೃಹಗಳನ್ನು ನಿರ್ಮಿಸುವ ಇನ್ನೊಂದು ಯೋಜನೆ ಇದೆ. ಇದರಲ್ಲಿ ಅಷ್ಟೂ ಹಣವನ್ನು ಧನ ಸಹಾಯವೆಂದೇ

ಪರಿಗಣಿಸಲಾಗುವುದು. ಇವರ ಪ್ರಕಾರ ಭದ್ರವಾದ ಛಾವಣಿ ಮತ್ತು ಆಧಾರಸ್ತಂಭಗಳನ್ನು ನಿರ್ಮಿಸಿಕೊಡಲಾಗುತ್ತದೆ. ಉಳಿದುದನ್ನು ಅಂದರೆ ಗೋಡೆ ಮತ್ತು ಅಡ್ಡಗೋಡೆಗಳನ್ನು ಪ್ರಯೋಜನ ಪಡೆದಾತನು ಕಟ್ಟಿಕೊಳ್ಳುತ್ತಾನೆ. ಬಜೆಟ್ಟಿನಲ್ಲಿ ಒದಗಿಸಿದ ಒಟ್ಟು 7.5 ಕೋಟಿ ರೂಪಾಯಿ ಪೈಕಿ ಸುಮಾರು 10 ಲಕ್ಷ ರೂಪಾಯಿಯು ಹೆಚ್ಚಿನ ಗ್ರಾಮೀಣ ಗೃಹನಿವೇಶನಗಳನ್ನು ಪಡೆದುಕೊಳ್ಳಲು ಖರ್ಚಾಗುತ್ತದೆ ಎಂದಿಟ್ಟುಕೊಂಡರೆ ಗ್ರಾಮೀಣ ಗೃಹನಿರ್ಮಾಣಕ್ಕೆ 7 ಕೋಟಿ ರೂಪಾಯಿ ದೊರೆಯುತ್ತದೆ. ಕರ್ನಾಟಕದಲ್ಲಿ ಕೈಗೊಂಡ ಈ ಪ್ರಯತ್ನವೂ ಹಳ್ಳಿಯ ಬಡಜನರಿಗೆ ಮನೆ ಒದಗಿಸುವ ಈ ಬೃಹತ್ ಸಮಸ್ಯೆಯನ್ನು ಎದುರಿಸುವಲ್ಲಿ ಭಾರತದ ಉಳಿದ ಭಾಗಕ್ಕೆ ದಾರಿದೀಪವಾಗುತ್ತದೆ ಎಂಬ ಭರವಸೆ ನನಗಿದೆ

ನಗರ ನಿವೇಶನ ಕಾರ್ಯಕ್ರಮ

28 ಗ್ರಾಮೀಣ ಗೃಹನಿವೇಶನಗಳಿಗೆ ಮತ್ತು ಜನತಾ ಗೃಹ ನಿರ್ಮಾಣ ಕಾರ್ಯಕ್ಕೆ ಒದಗಿಸಿದ 7.5 ಕೋಟಿ ರೂಪಾಯಿ ಜೊತೆಗೆ, ಇನ್ನೂ ಒಂದು ಕೋಟಿ ರೂಪಾಯಿ ಹಣವನ್ನು ನಗರ ಗೃಹನಿವೇಶನ ಕಾರ್ಯಕ್ರಮದ ಮೇರೆಗೆ ಗೃಹನಿವೇಶನಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಒದಗಿಸಲಾಗಿದೆ. ನಗರ ಪ್ರದೇಶದ ಅಭಿವೃದ್ಧಿಗೆ ಸಾಕಷ್ಟು ಗಮನ ದೊರೆಯುವಂತೆ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗಾಗಿ ಮುಂದಿನ ವರ್ಷ 1 ಕೋಟಿ ರೂಪಾಯಿ ಒದಗಿಸಲಾಗುವುದು ಮತ್ತು ಹಸಿರು ಪ್ರದೇಶಗಳನ್ನು ಬೆಳೆಸುವುದು, ರಿಂಗ್ ರೋಡುಗಳನ್ನು ನಿರ್ಮಿಸುವುದು ಮುಂತಾದ ಸಾಮಾನ್ಯ ನಗರಾಭಿವೃದ್ಧಿ ಕಾರ್ಯಕ್ರಮಗಳಿಗೆ 45 ಲಕ್ಷ ರೂಪಾಯಿ ಹಣ ಒದಗಿಸಲಾಗುವುದು. ಗೃಹನಿರ್ಮಾಣ ಮಂಡಲಿಯೂ ತನ್ನದೇ ಆದ ಗೃಹ ನಿರ್ಮಾಣ ಕಾರ್ಯಕ್ರಮಗಳನ್ನು ಹೊಂದಿದೆ.

ಸಾಲ ಸೌಲಭ್ಯಗಳು

29 ಕಡಿಮೆ ದರದಲ್ಲಿ ಬಡ್ಡಿ ಸಾಲ ಒದಗಿಸುವ ಸೌಲಭ್ಯವು ಮಹತ್ವದ ಕಾರ್ಯಕ್ರಮವಾಗಿದೆ. ಈ ಸೌಲಭ್ಯದಿಂದ ಸಣ್ಣ ಮತ್ತು ಬಡ ರೈತರು ಕೃಷಿ ಕಾರ್ಮಿಕರು, ಕುಶಲ ಕರ್ಮಿಗಳು ಮತ್ತು ತೀರ ಕಡಿಮೆ ವಾರ್ಷಿಕ ಆದಾಯವಿರುವವರೇ ಮೊದಲಾದ ವಿಶೇಷವಾಗಿ ಸಮಾಜದ ದುರ್ಬಲ ವರ್ಗದವರಿಗೆ ಪ್ರಯೋಜನಕರವಾಗಿದೆ. ಸಮಾಜದ ಈ ದುರ್ಬಲವರ್ಗದವರಿಗೆ ಪ್ರಯೋಜನಕರವಾಗಿದೆ ಸಮಾಜದ ಈ ದುರ್ಬಲವರ್ಗದವರು ಅತಿ ಹೆಚ್ಚಿನ ಬಡ್ಡಿದರದ ಮೇಲೆ ಸಾಲ ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಸದಸ್ಯರಿಗೆ ತಿಳಿದಿರುವಂತೆ, ವಿವಿಧ ಬಡ್ಡಿದರ ಪರಿಶೀಲನ ಸಮಿತಿಯು ಶಿಫಾರಸು ಮಾಡಿದ ಯೋಜನೆಯನ್ನು ಅನುಸರಿಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಲಾಯಿತು. ಈ ಯೋಜನೆಯನ್ನು ಭಾರತ ಸರ್ಕಾರದವರು ಮೊಟ್ಟಮೊದಲು ಔದ್ಯಮಿಕವಾಗಿ ಹಿಂದುಳಿದವೆಂದು ಘೋಷಿಸಲಾದ 11 ಜಿಲ್ಲೆಗಳಲ್ಲಿ ಜಾರಿಗೆ ತರಲಾಯಿತು. ವಿವಿಧ ಬಡ್ಡಿದರಗಳ ಯೋಜನೆಯ ಮೇರೆಗೆ ಆರ್ಥಿಕ ಸಹಾಯ ಪಡೆಯಲು ಅರ್ಹರಾದ ಕುಶಲ ಕರ್ಮಿಗಳು ಮತ್ತು ತೀರ ಬಡವರ್ಗದವರ ಸ್ಥಿತಿಗತಿಗಳು ಔದ್ಯಮಿಕವಾಗಿ ಹಿಂದುಳಿದ ಜಿಲ್ಲೆಗಳು ಮತ್ತು ಔದ್ಯಮಿಕವಾಗಿ ಹಿಂದುಳಿದ ಜಿಲ್ಲೆಗಳಲ್ಲವೆಂದು ಪರಿಗಣಿಸಿದ ಪ್ರದೇಶಗಳಲ್ಲಿ ಗಣನೀಯವಾಗಿ ವ್ಯತ್ಯಾಸವಾಗುವುದಿಲ್ಲವಾದುದರಿಂದ ರಾಜ್ಯ ಸರ್ಕಾರದವರು ಈ ಯೋಜನೆಯನ್ನು ಆ ತರುವಾಯ ಹಿಂದುಳಿದ 8 ಜಿಲ್ಲೆಗಳಿಗೆ ವಿಸ್ತರಿಸಿದರು. ಔದ್ಯಮಿಕವಾಗಿ ಹಿಂದುಳಿದ 11 ಜಿಲ್ಲೆಗಳಲ್ಲಿ ಸ್ವತಃ ಬ್ಯಾಂಕುಗಳೇ ಈ ವಿವಿಧ ದರದ ಬಡ್ಡಿಗಳನ್ನು ಸಮೀಕರಿಸಿವೆ. ಇತ್ತೀಚೆಗೆ ಭಾರತ ಸರ್ಕಾರದವರು ಈ ಯೋಜನೆಯನ್ನು ಸಣ್ಣ ರೈತರ ಅಭಿವೃದ್ಧಿ ಏಜೆನ್ಸಿಗಳು ಕೆಲಸಮಾಡುವ ಮತ್ತೆರಡು ಜಿಲ್ಲೆಗಳಿಗೆ ವಿಸ್ತರಿಸಿದ್ದಾರೆ. ಈ ಜಿಲ್ಲೆಗಳಲ್ಲಿಯೂ ಕೂಡ, ಈ ವಿವಿಧ ದರದ ಬಡ್ಡಿಯನ್ನು ಬ್ಯಾಂಕುಗಳು ಸಮೀಕರಿಸಿವೆ. ಇನ್ನುಳಿದ 6 ಜಿಲ್ಲೆಗಳಲ್ಲಿ ಸರ್ಕಾರದವರು ಬಡ್ಡಿಯಲ್ಲಿಯ ಈ ವ್ಯತ್ಯಾಸವನ್ನು ಬ್ಯಾಂಕುಗಳಿಗೆ ತುಂಬಿಕೊಡುವರು. ವಸ್ತುತಃ ವಿವಿಧ ಬಡ್ಡಿದರಗಳ ಯೋಜನೆಯ ಸೌಲಭ್ಯಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ದೊರೆಯುವಂತೆ ಕ್ರಮಕೈಗೊಂಡ ರಾಜ್ಯಗಳಲ್ಲಿ ಕರ್ನಾಟಕವೇ ಪ್ರಥಮ ರಾಜ್ಯವಾಗಿದೆ. ನಮ್ಮ ಸರ್ಕಾರವು ಈ ದಿಸೆಯಲ್ಲಿ ಮೊದಲ ಹೆಜ್ಜೆ

ಇಟ್ಟಿದೆಯೆಂದು ಹೇಳಬಹುದು. ಅಷ್ಟೇ ಅಲ್ಲ ರಾಷ್ಟ್ರೀಕೃತವಾಗುವ ಬ್ಯಾಂಕುಗಳು ಕೂಡ ಸಮಾಜದ ದುರ್ಬಲ ವರ್ಗದವರಿಗೆ ಕಡಿಮೆ ಬಡ್ಡಿ ದರದ ಮೇಲೆ ಸಾಲ ಸೌಲಭ್ಯ ಒದಗಿಸಲು ಅನುಕೂಲವಾಗುವಂತೆ ಮೂಲ ಯೋಜನೆಯನ್ನು ನಾವು ಸ ಧಾರಿಸಿದ್ದೇವೆ.

30. ವಿವಿಧ ಬಡ್ಡಿ ದರಗಳ ಯೋಜನೆಯ ಮೇರೆಗೆ ಆರ್ಥಿಕ ನೆರವು ಪಡೆಯಲು ಅರ್ಹರಾದವರನ್ನು ಗುರುತಿಸಿ, ಅವರಿಗೆ ನೆರವು ದೊರೆಯುವಂತೆ ಮೊದಲು ಎಲ್ಲಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ಸಾಲ ಸೌಲಭ್ಯ ನೀಡುವ ಸಹಾಯಕ ಅಧಿಕಾರಿಗಳೆಂದು ನಿರ್ದೇಶಿಸಿ, ಅವರು ಅರ್ಹರಾದ ಜನರನ್ನು ಗುರುತಿಸುವಂತೆ ಮತ್ತು ಸಾಲ ಸೌಲಭ್ಯ ಅಗತ್ಯವಿರುವವರಿಗೆ ಸಾಲ ದೊರೆಯುವಂತೆ ಏರ್ಪಾಟು ಮಾಡುವಂತೆಯೂ ಅವರಿಗೆ ಹೊಣೆಯನ್ನು ವಹಿಸಿಕೊಡಲಾಗಿದೆ.

31. ವಿವಿಧ ಬಡ್ಡಿ ದರದ ಯೋಜನೆಯ ಕಾರ್ಯಾಚರಣೆಗೆ ಸದಾ ಗಮನ ನೀಡಲಾಗಿದೆ ಮತ್ತು ಈ ದಿಸೆಯಲ್ಲಿ ಸಾಕಷ್ಟು ಪ್ರಗತಿ ಸಾಧನೆಯಾಗಿದೆ. 1975ರ ಡಿಸೆಂಬರ್ ಕೊನೆಯವರೆಗೆ ವಿವಿಧ ಬಡ್ಡಿ ದರದ ಯೋಜನೆಯ ಮೇರೆಗೆ ರಾಜ್ಯದಲ್ಲಿ ಕೊಟ್ಟ ಒಟ್ಟು ಸಾಲದ ಪ್ರಮಾಣವು 220 ಲಕ್ಷ ರೂಪಾಯಿಯಾಗಿದೆ ಮತ್ತು 48,899 ಜನ ಈ ಯೋಜನೆಯ ಮೇರೆಗೆ ಆರ್ಥಿಕ ನೆರವು ಪಡೆದಿದ್ದಾರೆ. ಡಿಸೆಂಬರ್ 1976ರ ಕೊನೆಯಲ್ಲಿ ಸಾಲದ ಒಟ್ಟು ಪ್ರಮಾಣವು 566 ಲಕ್ಷ ರೂಪಾಯಿಯಾಗಿತ್ತು ಮತ್ತು 1,32,643 ಜನ ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಹೀಗೆ 1976ರ ವರ್ಷದಲ್ಲಿ ಸಾಲ ಸೌಲಭ್ಯ ಪ್ರಮಾಣವು 3,46 ಕೋಟಿ ರೂಪಾಯಿಯಷ್ಟು ಹೆಚ್ಚಾಗಿದ್ದು, 85,744 ಜನರಿಗೆ ಇದರಿಂದ ಪಯೋಜನ ದೊರೆತಿಯೆಂದು ಹೇಳಬಹುದು.

ಹಿಂದುಳಿದ ವರ್ಗಗಳ ಕಲ್ಯಾಣ

32. ಸರ್ಕಾರವು ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಕೆಲವು ಮಾರ್ಪಾಟುಗಳೊಂದಿಗೆ ಸ್ವೀಕರಿಸಿದೆ. ಆ ಮೇರೆಗೆ ಹಿಂದುಳಿದ ವರ್ಗಗಳಿಗೆ ಇನ್ನಷ್ಟು ಪ್ರಯೋಜನಗಳು ದೊರೆಯುತ್ತವೆ. ಸಂವಿಧಾನದ ಅನುಚ್ಛೇದ 15(4) ಮತ್ತು 16(4)ರ ಮೇರೆಗೆ ಹಿಂದುಳಿದ ವರ್ಗದ ಜನರು ಸರ್ಕಾರಿ ಸೇವೆಗಳಲ್ಲೂ ವಿದ್ಯಾ ಸಂಸ್ಥೆಗಳಲ್ಲೂ ಸ್ಥಾನಗಳ ಮೀಸಲಾತಿಗೆ ಹಕ್ಕುಳ್ಳವರಾಗುತ್ತಾರೆ. ಈ ಸೌಲಭ್ಯವು ವರ್ಷಕ್ಕೆ 8,000 ರೂಪಾಯಿ ವರಮಾನ ಇರುವವರಿಗೆ ದೊರೆಯುತ್ತದೆ.

ಮೀಸಲಾತಿಗಳನ್ನು ಕೆಳಕಂಡಂತೆ ನಿರ್ಧರಿಸಲಾಗುವುದು :

ಹಿಂದುಳಿದ ಕೋಮುಗಳು	ಶೇಕಡ	20
ಹಿಂದುಳಿದ ಜಾತಿಗಳು	ಶೇಕಡ	10
ಹಿಂದುಳಿದ ಬುಡಕಟ್ಟುಗಳು	ಶೇಕಡ	5
ವಿಶೇಷ ವರ್ಗಗಳು	ಶೇಕಡ	5

33. ವಿಶೇಷ ವರ್ಗದಲ್ಲಿ ವರ್ಷಕ್ಕೆ 4,800 ರೂ ವರೆಗೆ ವರಮಾನವಿರುವ ಕೃಷಿಕರು, ಕುಶಲಕರ್ಮಿಗಳು ಸ್ವಯಿಯೋಜಿತ ವ್ಯಕ್ತಿಗಳು ಕೂಲಿಕಾರ ಮುಂತಾದವರು ಒಳಗೊಳ್ಳುತ್ತಾರೆ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ಈಗ ಕಾಯ್ದಿರಿಸಲಾದ ಶೇ. 18ರ ಸ್ಥಾನಗಳ ಹೆಚ್ಚಿಗೆಯಾಗಿ ಅವರಿಗೆ ಶೇ. 40ರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಇಂತಹ ಪ್ರಯೋಜನಗಳಿಗೆ ಅರ್ಹರಾಗಬಹುದಾದ ಇತರ ಹಿಂದುಳಿದ ಸಮಾಜವರ್ಗದ ಕೋರಿಕೆಗಳನ್ನು ಪರಿಶೀಲಿಸಲು ಸರ್ಕಾರವು ಸಲಹಾ ಸಮಿತಿಯನ್ನು ರಚಿಸಲು ಸಹ ನಿರ್ಧಾರ ಮಾಡಿದೆ. ಸರ್ಕಾರವು ದುರ್ಬಲ ವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಗಮನ ನೀಡುತ್ತ ಬಂದಿದೆ ಇನ್ನು ಮುಂದೆಯೂ ಇದೇ ರೀತಿ ಗಮನ ನೀಡುವುದೆಂಬ ಬಗ್ಗೆ ಬೇರೆ ಹೇಳಬೇಕಾಗಿಲ್ಲವೆಂದು ನಾನು ಭಾವಿಸಿದ್ದೇನೆ.

೧೯೭೬-೭೭ರ ಪರಿಷ್ಕೃತ ಅಂದಾಜುಗಳು

34. ಪರಿಷ್ಕೃತ ಅಂದಾಜುಗಳನ್ನು ರೆವೆನ್ಯೂ ಲೆಕ್ಕದಲ್ಲಿ ಒಟ್ಟು 552.34 ಕೋಟಿ ರೂಪಾಯಿ ವರಮಾನವನ್ನು ಸೂಚಿಸುತ್ತವೆ. ಈ ವರ್ಷದ ರೆವೆನ್ಯೂ ವೆಚ್ಚವು 505.76 ಕೋಟಿ ರೂಪಾಯಿ ಆಗಬಹುದೆಂದು ಅಂದಾಜು ಮಾಡಲಾಗಿದ್ದು, ಇದರಿಂದ 46.58 ಕೋಟಿ ರೂಪಾಯಿ ರೆವೆನ್ಯೂ ಹೆಚ್ಚುವರಿ ದೊರೆತಂತಾಗುವುದು.

35 ಕರಮೂಲವಲ್ಲದ ರೆವೆನ್ಯೂ ಕ್ಷೇತ್ರದಲ್ಲಿ ವರಮಾನದ ಹೆಚ್ಚಳವು ಪ್ರಧಾನವಾಗಿ ಕಂಡು ಬರುತ್ತಿವೆ. ಪ್ರಧಾನವಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಮತ್ತು ಮೈಸೂರು ವಿದ್ಯುನ್ನಿಗಮವು ಹೆಚ್ಚು ಪ್ರಮಾಣದಲ್ಲಿ ಬಡ್ಡಿ ಕೊಡುತ್ತಿದ್ದು ಈ ಹೆಚ್ಚು ಬಡ್ಡಿಯು ಕಾರಣದಿಂದ ಸರ್ಕಾರಕ್ಕೆ ಸುಮಾರು 13 ಕೋಟಿ ರೂಪಾಯಿ ಬಡ್ಡಿ ರೂಪದ ವರಮಾನ ದೊರೆಯುವ ನಿರೀಕ್ಷೆಯಿದೆ. ಬಜೆಟ್ ಅಂದಾಜುಗಳಲ್ಲಿ ತೋರಿಸಿರುವುದಕ್ಕಿಂತ ಹೆಚ್ಚಾಗಿ ಕೇಂದ್ರಸರ್ಕಾರದಿಂದ ಸುಮಾರು 12 ಕೋಟಿ ರೂಪಾಯಿಯಷ್ಟು ಅನುದಾನಗಳನ್ನು ದೊರೆಯಲಿವೆ. ಕುಟುಂಬ ಯೋಜನೆ ಮತ್ತು ಯೋಜನಾ ಸಹಾಯ ಮೊದಲಾದ ಕಾರ್ಯಕ್ರಮಗಳಿಗೆ ಹೆಚ್ಚು ಹಣ ಒದಗಿಸಿರುವುದರಿಂದ ವೆಚ್ಚಳವು ಕಂಡು ಬರುತ್ತದೆ.

36. 505.76 ಕೋಟಿ ರೂಪಾಯಿಗಳ ರೆವೆನ್ಯೂ ವೆಚ್ಚವು ಮೂಲ ಬಜೆಟ್ ಅಂದಾಜುಗಳಿಗಿಂತ 6 ಕೋಟಿ ರೂಪಾಯಿಯಷ್ಟು ಹೆಚ್ಚಾಗುವುದು ಆದರೆ ಸಾಮಾನ್ಯ ಸೇವೆಗಳ ಬಗ್ಗೆ ಸಿಂಕಿಂಗ್ ಫಂಡ್‌ಗಳಲ್ಲಿ ಕೊರತೆಯಿಂದಾಗಿ 8 ಕೋಟಿ ರೂಪಾಯಿಯಷ್ಟು ವೆಚ್ಚವು ಕಡಿಮೆಯಾಗಿದ್ದರೂ ಇದು ನಿವ್ವಳ ಹೆಚ್ಚಳವನ್ನು ಸೂಚಿಸುವುದು. ಹೀಗೆ ರೆವೆನ್ಯೂ ಲೆಕ್ಕದಲ್ಲಿ ಅಭಿವೃದ್ಧಿ ವೆಚ್ಚದ ಹೆಚ್ಚಳವು ಬಜೆಟ್ ಅಂದಾಜುಗಳಿಗೆ ಹೋಲಿಸಲಾಗಿ 15 ಕೋಟಿ ರೂಪಾಯಿಗಳಷ್ಟು ಹೆಚ್ಚಿದೆಯೆಂದು ಹೇಳಬಹುದು. ಸಣ್ಣ ಪ್ರಮಾಣದ ನೀರಾವರಿಗೆ (3,18 ಕೋಟಿ ರೂಪಾಯಿ), ಭೂಸಾರ ರಕ್ಷಣೆಗೆ 2.03 ಕೋಟಿ ರೂಪಾಯಿ) ನೀರು ಸರಬರಾಜಿಗೆ (2.67 ಕೋಟಿ ರೂಪಾಯಿ) ಅರಣ್ಯ ಬೆಳೆಸುವಿಕೆ (0.64 ಕೋಟಿ ರೂಪಾಯಿ) ಮತ್ತು ರಸ್ತೆ ನಿರ್ಮಾಣ 1.56 ಕೋಟಿ ರೂಪಾಯಿ ಹೀಗೆ ಕ್ಷಾಮ ಪರಿಹಾರ ಕಾರ್ಯಕ್ರಮದ ಅಂಗವಾಗಿ ಈ ಯೋಜನೆಗಳಿಗೆ ನಾವು ಹೆಚ್ಚು ಹಣ ಒದಗಿಸಿರುವುದರಿಂದ ವೆಚ್ಚದ ಈ ಹೆಚ್ಚಳವು ಕಂಡುಬರುತ್ತಿದೆ.

37. ಬಂಡವಾಳ ಲೆಕ್ಕದಲ್ಲಿ 168 14 ಕೋಟಿ ರೂಪಾಯಿ ಬಜೆಟ್ ಅಂದಾಜುಗಳಿಗೆ ಹೋಲಿಸಲಾಗಿ ಈ ವರ್ಷದಲ್ಲಿ ಬಂದ ವರಮಾನವು 152.74 ಕೋಟಿ ರೂಪಾಯಿಯಷ್ಟಾಗುವುದೆಂದು ಅಂದಾಜು ಮಾಡಲಾಗಿದೆ ಭಾರತ ಸರ್ಕಾರದಿಂದ ಸಾಲದ ರೂಪದಲ್ಲಿ ದೊರೆಯುವ ವರಮಾನವು ಸುಮಾರು 5 ಕೋಟಿ ರೂಪಾಯಿಯಷ್ಟು ಕಡಿಮೆಯಾದ ಕಾರಣ ರಾಜ್ಯದ ಮತ್ತು ಕೇಂದ್ರ ಸರ್ಕಾರದ ಯೋಜನೆಗಳಿಗೆ ಭಾರತ ಸರ್ಕಾರವ ನೀಡುವ ಸಾಲುಗಳ ಗಾತ್ರವು ಹೆಚ್ಚಾಗಿದ್ದರೂ ಪ್ರಸಕ್ತ ವರ್ಷದಲ್ಲಿ ರಾಜ್ಯದ ನಗದು ಹಣಕಾಸಿನ ಪರಿಸ್ಥಿತಿಯು ತೃಪ್ತಿದಾಯಕವಾಗಿದ್ದುದರಿಂದ 10 ಕೋಟಿ ರೂಪಾಯಿ ಅರ್ಥೋಪಾಯ ಅಗ್ರಿಮಧನವನ್ನು ನಾವು ಪಡೆದುಕೊಳ್ಳಲಿಲ್ಲ. ಆದುದರಿಂದ ಕೊರತೆ ಕಂಡುಬಂದಿದೆ ಮುಖ್ಯವಾಗಿ ಪ್ರತಿಕೂಲ ಋತುಮಾನ ಪರಿಸ್ಥಿತಿಯಿಂದ ಸಾಲ ಮತ್ತು ಮುಂಗಡಗಳ ವಸೂಲಿಯಲ್ಲಿ ಸುಮಾರು 2 ಕೋಟಿ ರೂಪಾಯಿ ಕೊರತೆಯು ಮತ್ತು ಅನೇಕ ಬಗೆಯ ಹೊಂದಾಣಿಕೆ ಬಾಬುಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಲೆಕ್ಕದಲ್ಲಿ ಸುಮಾರು 3 ಕೋಟಿ ರೂಪಾಯಿ ಕೊರತೆಯು ಕಂಡುಬರುವುದು ಮುಖ್ಯವಾಗಿ ಭೂಸುಧಾರಣಾ ಅಧಿನಿಯಮದ ಮೇರೆಗೆ ಬಾಂಡುಗಳನ್ನು ಹೊರಡಿಸುವ ಯೋಜನೆಯನ್ನು ಅಂತಿಮಗೊಳಿಸುವಲ್ಲಿ ವಿಳಂಬವಾದ ಕಾರಣ ಬಹಿರಂಗ ಮಾರುಕಟ್ಟೆ ಇತ್ಯಾದಿಗಳಿಂದ ಬರುವ ವರಮಾನದಲ್ಲಿ ಸುಮಾರು 7 ಕೋಟಿ ರೂಪಾಯಿ ಕೊರತೆ ಕಂಡುಬರುವುದು.

38. ಬಂಡವಾಳ ಲೆಕ್ಕದಲ್ಲಿ 213 14 ಕೋಟಿ ರೂಪಾಯಿ ಬಜೆಟ್ ಅಂದಾಜಿಗೆ ಪ್ರತಿಯಾಗಿ 208.49 ಕೋಟಿ ರೂಪಾಯಿ ಬಟವಾಡೆಯಾಗುವುದು. ಬಂಡವಾಳ ವಿನಿಯೋಗವಲ್ಲಿ ಸುಮಾರು 15 ಕೋಟಿ ರೂಪಾಯಿ ಹೆಚ್ಚಳವಾಗಿದೆ. ಇದು ಪ್ರಧಾನವಾಗಿ ಭಾರಿ ಪ್ರಮಾಣದ ನೀರಾವರಿಯಲ್ಲಿ ಕಂಡುಬರುವುದು. (9.8 ಕೋಟಿ ರೂಪಾಯಿ) ಸಣ್ಣ ಪ್ರಮಾಣದ ನೀರಾವರಿ ಬಂಡವಾಳ ವಿನಿ

ಯೋಗವು ಕೂಡ 1.32 ಕೋಟಿ ರೂಪಾಯಿಯಷ್ಟು ರಸ್ತೆ ಮತ್ತು ಸೇತುವೆ ನಿರ್ಮಾಣದ ವೆಚ್ಚವು 0.68 ಕೋಟಿ ರೂಪಾಯಿಯಷ್ಟು ಹೆಚ್ಚಿವೆ ಪ್ರಸಕ್ತ ವರ್ಷದಲ್ಲಿ ಪ್ರಧಾನವಾಗಿ ಕಾಳೀನದಿ ಯೋಜನೆ ವೆಚ್ಚದಲ್ಲಿ ಕೊರತೆಯಾಗುವುದರಿಂದ ಸಾಲ ಮತ್ತು ಮುಂಗಡಗಳ ಬಟವಾಡೆಯು ಕೂಡ ಸುಮಾರು 10 ಕೋಟಿ ರೂಪಾಯಿಯಷ್ಟು ಕಡಿಮೆಯಾಗಿದೆ. ಭಾರತ ಸರ್ಕಾರಕ್ಕೆ ಮರುಸಂದಾಯ ಮಾಡ ಬೇಕಾದ ಸಾಲಪ್ರಮಾಣವು ಸುಮಾರು 10 ಕೋಟಿ ರೂಪಾಯಿಯಷ್ಟು ಕಡಿಮೆಯಾಗುವುದು. ಹಿಂದಿನ ಭಾಷಣದಲ್ಲಿ ಹೇಳಿದಂತೆ ಪ್ರಸಕ್ತ ವರ್ಷದಲ್ಲಿ ನಾವು ಅರ್ಥೋಪಾಯ ಅಗ್ರಿಮಧನವನ್ನು (ವೇಸ್ ಅಂಡ್ ಮೀನ್ಸ್) ಉಪಯೋಗಿಸಿಕೊಳ್ಳದಿರುವುದೇ ಇದಕ್ಕೆ ಕಾರಣ.

39. 55.75 ಕೋಟಿ ರೂಪಾಯಿ ಕೊರತೆಯನ್ನು ಬಂಡವಾಳ ಲೆಕ್ಕದಲ್ಲಿ ತೆಗೆದುಕೊಂಡರೆ ಪ್ರಸಕ್ತ ವರ್ಷದ ಒಟ್ಟು ಕೊರತೆಯು 9.17 ಕೋಟಿ ರೂಪಾಯಿ ಯಷ್ಟಾಗುವುದು ಮುಕ್ತಾಯದ 2.97 ಕೋಟಿ ರೂಪಾಯಿ ಕೊರತೆ ಬಾಕಿಯನ್ನು ಸೇರಿಸಿಕೊಂಡರೆ ಪ್ರಸಕ್ತ ವರ್ಷದ ಕೊನೆಯಲ್ಲಿ 12.14 ಕೋಟಿ ರೂಪಾಯಿಯಷ್ಟು ಖರ್ಚಿನ ಶಿಲ್ಕು ಕಂಡುಬರುವುದು.

1977-78ರ ಬಜೆಟ್ ಅಂದಾಜುಗಳು

40. ಬರುವ ವರ್ಷದ ರೆವೆನ್ಯೂ ಲೆಕ್ಕದ ವರಮಾನವು 595.47 ಕೋಟಿ ರೂಪಾಯಿ ಯಷ್ಟು ಆಗುವುದೆಂದು ನಿರೀಕ್ಷಿಸಲಾಗಿದೆ. ಕರಗಳಿಂದಾಗಿ ರಾಜ್ಯದ ರೆವಿನ್ಯೂ ವರಮಾನವೂ 26 ಕೋಟಿ ರೂಪಾಯಿಯಷ್ಟು ಹೆಚ್ಚುವ ನಿರೀಕ್ಷೆಯಿದೆ. ಈ ಹೆಚ್ಚಳವು ಪ್ರಧಾನವಾಗಿ ಮಾರಾಟ ಕರ (13 5 ಕೋಟಿ ರೂಪಾಯಿ). ರಾಜ್ಯದ ಅಬಕಾರಿ ಶುಲ್ಕ (5 5 ಕೋಟಿ ರೂಪಾಯಿ), ಮೋಟಾರು ವಾಹನಗಳ ಕರ (1.5 ಕೋಟಿ ರೂಪಾಯಿ). ಇತರ ಕರಗಳು ಮತ್ತು ಶುಲ್ಕಗಳು (2.3 ಕೋಟಿ ರೂಪಾಯಿ), ಭೂ ಕಂದಾಯ (1.65 ಕೋಟಿ ರೂಪಾಯಿ) ಬಾಬುಗಳಿಗೆ ಸಂಬಂಧಿಸಿವೆ. ಕೇಂದ್ರ ಕರಗಳಲ್ಲಿ ರಾಜ್ಯದ ಪಾಲು 97.11 ಕೋಟಿ ರೂಪಾಯಿಯಷ್ಟು ಆಗುವುದು. ಅಂದರೆ. ಇದರಿಂದ ಪ್ರಸಕ್ತ ವರ್ಷ ಪರಿಷ್ಕೃತ ಅಂದಾಜುಗಳಿಗಿಂತ 5.39 ಕೋಟಿ ರೂಪಾಯಿ ಹೆಚ್ಚು ದೊರತಂತಾ ಗುವುದು. ಕೇಂದ್ರ ಸರ್ಕಾರದಿಂದ 50 09 ಕೋಟಿ ರೂಪಾಯಿ ಅನುದಾನಗಳು ದೊರೆಯುವ ನಿರೀಕ್ಷೆಯಿದೆ. ಅನೇಕ ಯೋಜನಾ ಕಾರ್ಯಕ್ರಮಗಳಿಗೆ ಅನುದಾನಗಳು ದೊರತಿರುವುದರಿಂದ ಪ್ರಧಾನವಾಗಿ ಈ ಹೆಚ್ಚಳವು ಕಂಡುಬರುತ್ತದೆ. ಮುಂಬರುವ ವರ್ಷದ ಕರೇತರ ವರಮಾನವು 154.75 ಕೋಟಿ ರೂಪಾಯಿಯಷ್ಟಾಗುವುದು. ಇದು ಪ್ರಸಕ್ತ ವರ್ಷದ ಅಂದಾಜಿಗಿಂತ 6 ಕೋಟಿ ರೂಪಾಯಿಯಷ್ಟು ಹೆಚ್ಚಳವನ್ನು ಸೂಚಿಸುವುದು,

41. ಬರುವ ವರ್ಷದ ರೆವೆನ್ಯೂ ಲೆಕ್ಕದ ವೆಚ್ಚ 570.78 ಕೋಟಿ ರೂಪಾಯಿಯಷ್ಟು ಆಗುವುದು. ಇದು ಪ್ರಸಕ್ತ ವರ್ಷ ಪರಿಷ್ಕೃತ ಅಂದಾಜುಗಳಿಂತ 65 02 ಕೋಟಿ ರೂಪಾಯಿ ಯಷ್ಟು ಹೆಚ್ಚಾಗುವುದು ವೇತನ. ನಿವೃತ್ತಿ ವೇತನ ಇತ್ಯಾದಿಗಳ ಪರಿಷ್ಕರಣದಿಂದ 20 ಕೋಟಿ ರೂಪಾಯಿಯಷ್ಟು ಹೆಚ್ಚಿನ ವೆಚ್ಚ ಬಂದಿರುವುದನ್ನು ಲೆಕ್ಕಕ್ಕೆ ತೆಗೆದುಕೊಂಡಾಗಲೂ 45 ಕೋಟಿ ರೂಪಾಯಿಯಷ್ಟು ಹೆಚ್ಚಳವು ಕಂಡುಬರುತ್ತದೆ. ಈ ಹೆಚ್ಚಳದ ಬಹು ಭಾಗವು ಸಾಮಾಜಿಕ ಮತ್ತು ಸಾಮುದಾಯಿಕ ಸೇವೆಗಳಿಗೆ ಮತ್ತು ಆರ್ಥಿಕ ಸೇವೆಗಳಿಗೆ ಸಂಬಂಧಿಸಿದ್ದಾಗಿದೆ. ಪ್ರಸಕ್ತ ವರ್ಷದ ಶಿಕ್ಷಣ ವೆಚ್ಚವು 105.68 ಕೋಟಿ ರೂಪಾಯಿ ಆಗಿದ್ದರೂ ಮುಂಬರುವ ವರ್ಷದ ಶಿಕ್ಷಣ ವೆಚ್ಚವು 129.45 ಕೋಟಿ ರೂಪಾಯಿಯಷ್ಟಾಗುವುದು ಬರುವ ವರ್ಷ, ಮಧ್ಯಾಹ್ನ ಊಟದ ಕಾರ್ಯಕ್ರಮದ ಖರ್ಚಿನಬಹು ಭಾಗವು ಇದರಲ್ಲಿ ಒಳಗೊಂಡಿದೆ. ವೈದ್ಯಕೀಯ ಮತ್ತು ಜನಾರೋಗ್ಯದ ವೆಚ್ಚವು 43.30 ಕೋಟಿ ರೂಪಾಯಿಯಷ್ಟಾಗುವುದು. ಇದು ಪ್ರಸಕ್ತ ವರ್ಷದಲ್ಲಿ 39 18 ಕೋಟಿ ರೂಪಾಯಿ ಯಷ್ಟಾಗಿತ್ತು. ಔಷಧಗಳನ್ನು ಮತ್ತು ಇತರ ಅಗತ್ಯ ಆಸ್ಪತ್ರೆ ಅಗತ್ಯ ವಸ್ತುಗಳನ್ನು ಕೊಳ್ಳಲು ಹೆಚ್ಚು ಹಣವನ್ನು ಒದಗಿಸಲಾಗಿದೆ. ಸಾಮಾಜಿಕ ಸುವ್ಯವಸ್ಥೆ ಮತ್ತು ಕಲ್ಯಾಣ ಕಾರ್ಯಕ್ರಮಕ್ಕಾಗಿ 23.78 ಕೋಟಿ ರೂಪಾಯಿ ಒದಗಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಆ ಬಗ್ಗೆ 19 01 ಕೋಟಿ ರೂಪಾಯಿ ಒದಗಿಸಲಾಗುವುದು. ಬರುವ ವರ್ಷದ ಅಂದಾಜಿನಲ್ಲಿ ವಿಶೇಷ ಪೌಷ್ಟಿಕ ಆಹಾರ ಕಾರ್ಯಕ್ರಮದ ಮತ್ತು ವೃದ್ಧಾಪ್ಯ ವೇತನದ ಸಲುವಾಗಿಯೂ ಹೆಚ್ಚು ಹಣ ಒದಗಿಸಲಾಗಿದೆ,

42. ಬಂಡವಾಳದ ಆದಾಯವು ಮುಂದಿನ ವರ್ಷ 179. 13 ಕೋಟಿ ರೂಪಾಯಿಯಷ್ಟು ಹೆಚ್ಚಾಗುವುದು. ಭಾರತ ಸರ್ಕಾರದ ಸಾಲಗಳು ಪ್ರಸಕ್ತ ವರ್ಷಕ್ಕಿಂತ 9 ಕೋಟಿ ರೂಪಾಯಿ ಹೆಚ್ಚಾಗುವುದೆಂದು ನಿರೀಕ್ಷಿತಲಾಗಿದೆ. ಬಹಿರಂಗ ಮಾರುಕಟ್ಟೆ ಸಾಲಗಳಲ್ಲಿ ಸುಮಾರು 5 ಕೋಟಿ ರೂಪಾಯಿ ಹೆಚ್ಚಾಗುವುದು ಮತ್ತು ಕುದುರೆಮುಖ ಕಬ್ಬಿಣ ಅದುರು ಯೋಜನೆಯು ವಿದ್ಯುಚ್ಛಕ್ತಿ ಮತ್ತು ರಸ್ತೆ ಸಂಬಂಧವಾದ ಭಾಗಗಳಿಗಾಗಿ ಭಾರತದ ಉಕ್ಕಿನ ಪ್ರಾಧಿಕಾರದಿಂದ ಪಡೆದ ಸಾಲಗಳು 4 ಕೋಟಿ ರೂಪಾಯಿಗಳು. ಪ್ರಸಕ್ತ ವರ್ಷದಲ್ಲಿ ಇರುವ 20.08 ಕೋಟಿ ರೂಪಾಯಿಗಳಿಗೆ ಹೋಲಿಸಿ ನೋಡಿದಾಗ, ಸಾಲಗಳ ಮತ್ತು ಮುಂಗಡಗಳ ವಸೂಲಿಗಳು 26.25 ಕೋಟಿ ರೂಪಾಯಿಗಳಷ್ಟಾಗುವುದು.

43. ಪ್ರಸಕ್ತ ವರ್ಷದಲ್ಲಿನ 169-70 ಕೋಟಿ ರೂಪಾಯಿಗಳಿಗೆ ಹೋಲಿಸಿದಾಗ, ಮುಂದಿನ ವರ್ಷ ಸಾಲ ಮತ್ತು ಮುಂಗಡಗಳ ಬಟವಾಡೆಯು ಬಂಡವಾಳ ವೆಚ್ಚವು 184.93 ಕೋಟಿ ರೂಪಾಯಿಗಳಷ್ಟಾಗುವುದು ಪ್ರಸಕ್ತ ವರ್ಷದಲ್ಲಿನ 55.20 ಕೋಟಿ ರೂಪಾಯಿಗಳಿಗೆ ಹೋಲಿಸಿದಾಗ ಬಂಡವಾಳ ವೆಚ್ಚದ ಹೆಚ್ಚಳವು ನೀರಾವರಿ ಶೀರ್ಷಿಕೆಯಲ್ಲಿ ಮುಖ್ಯವಾಗಿ 67 28 ಕೋಟಿ ರೂಪಾಯಿಗಳಷ್ಟಾಗುವುದು. ಪ್ರಸಕ್ತ ವರ್ಷದಲ್ಲಿ ಇರುವ 33.22 ಕೋಟಿ ರೂಪಾಯಿಗಳಿಗೆ ಹೋಲಿಸಿದಾಗ, ವಿದ್ಯುತ್ ಯೋಜನೆಗಳ ಸಾಲಗಳ ಬಟವಾಡೆಯು 42.71 ಕೋಟಿ ರೂಪಾಯಿಗಳಷ್ಟಾಗುವುದು.

44. ರಾಜಸ್ವ ಲೆಕ್ಕದಲ್ಲಿ 24.69 ಕೋಟಿ ರೂಪಾಯಿಗಳ ಹೆಚ್ಚುವರಿಯಾಗುವುದೆಂದು ಮುಂದಿನ ವರ್ಷದ ಅಂದಾಜುಗಳಿಂದ ಕಂಡುಬರುವುದು. ಬಂಡವಾಳ ಲೆಕ್ಕದಲ್ಲಿ 50.69 ಕೋಟಿ ರೂಪಾಯಿಗಳ ಖೋತಾ ಆಗುವುದೆಂದು ಕಂಡು ಬರುವುದು. ಆದ್ದರಿಂದ, ಮುಂದಿನ ವರ್ಷದ ಸಮಗ್ರ ಖೋತಾ ಮೊತ್ತವು 26.00 ಕೋಟಿ ರೂಪಾಯಿಗಳಷ್ಟಾಗುವುದು. ಪ್ರಸಕ್ತ ವರ್ಷ ನಿರೀಕ್ಷಿಸಲಾದ 12·14 ಕೋಟಿ ರೂಪಾಯಿ ಖೋತಾ ಕೊನೆಯ ಶಿಲ್ಕು ಮೊತ್ತವೂ ಸೇರಿ ಮುಂದಿನ ವರ್ಷದ ಸಮಗ್ರ ಖೋತಾ ಮೊತ್ತವು 38,.0 ಕೋಟಿ ರೂಪಾಯಿಗಳಷ್ಟಾಗುವುದು.

45. ಸರ್ಕಾರದವರು ಕೈಗೊಂಡಿರುವ ಭಾರೀ ಪ್ರಮಾಣದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವುದಕ್ಕಾಗಿ 1972 ರಿಂದ ನಾವು ಸಾಕಷ್ಟು ಪ್ರಯತ್ನ ಮಾಡಿದ ಸಂಗತಿ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಅಂತೆಯೇ 1,120 ಕೋಟಿ ರೂಪಾಯಿ ಅಭಿವೃದ್ಧಿ ಬಂಡವಾಳ ವೆಚ್ಚದ 5ನೇ ಯೋಜನೆಯನ್ನು ಕೈಕೊಳ್ಳಲು ನಮಗೆ ಸಾಧ್ಯವಾಯಿತು ಮತ್ತು ನಮ್ಮ ಯೋಜನೆಯ ಮೂಲ ರೂಪರೇಷೆಗೆ ಮತ್ತು ಆದ್ಯತಾ ಕ್ರಮಗಳಿಗೆ ಬಾಧಕವಾಗದಂತೆ ಗ್ರಾಮಾಂತರ ವಸತಿ ನಿರ್ಮಾಣ ಮತ್ತು ಮಕ್ಕಳ ಪೌಷ್ಟಿಕ ಆಹಾರ ಕಾರ್ಯಕ್ರಮ ಮೊದಲಾದ ಕೆಲವು ಒಳ್ಳೆಯ ಕಾರ್ಯಕ್ರಮಗಳಿಗಾ ಹೆಚ್ಚು ಬಂಡವಾಳ ಒದಗಿಸುವುದಕ್ಕೂ ಇದರಿಂದ ಸಹಾಯವಾಯಿತು. ನಾವು ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಸದಾ ಪ್ರಯತ್ನಿಸಬೇಕೆಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಸಂಬಂಧದಲ್ಲಿ ಈಗಾಗಲೇ ಮಾಡಲಾದ ಪ್ರಯತ್ನಗಳನ್ನು ಮನದಂದು ಈ ವರ್ಷ ಭಾರೀ ಪ್ರಮಾಣದ ಯಾವ ಕರಗಳನ್ನೂ ನಾನು ವಿಧಿಸ ಬಯಸುವುದಿಲ್ಲ. ಆದರೂ, ನಮ್ಮ ಯೋಜನಾ ಕಾರ್ಯಕ್ರಮಗಳಿಗಾಗಿ ನಾವು ಸಂಪನ್ಮೂಲಗಳನ್ನು ಆಗಾಗ ಒದಗಿಸಿಕೊಳ್ಳಬೇಕಾಗುವುದರಿಂದ ಮಾರಾಟ ಕರ ಅಧಿನಿಯಮ ಮತ್ತು ಮನೋರಂಜನ ಕರ ಅಧಿನಿಯಮ—ಇವುಗಳಿಗೆ ಮಾತ್ರ ಕೆಲವೊಂದು ತಿದ್ದುಪಡಿಗಳನ್ನು ಮಾಡಲು, ನಾನು ಸೂಚಿಸ ಬಯಸುತ್ತೇನೆ.

46. ಈಗ ಕರ್ನಾಟಕ ಮಾರಾಟ ಕರ ಅಧಿನಿಯಮದ 5ನೇ ಪ್ರಕರಣ ಅಥವಾ 6ನೇ ಪ್ರಕರಣದ ಮೇರೆಗೆ ಮಾರಾಟ ಕರ ಕೊಡಲು ಬದ್ಧರಿರುವ ಮತ್ತು ಒಂದು ವರ್ಷದಲ್ಲಿ 10 ಲಕ್ಷ ರೂಪಾಯಿ ಅಥವಾ ಅದಕ್ಕೂ ಹೆಚ್ಚು ವಹಿವಾಟು ಮಾಡುವ ವ್ಯಾಪಾರಿಗಳ ಮೇಲೆ ಈಗಾಗಲೇ ಹೆಚ್ಚಿನ ಕರ ವಿಧಿಸಲಾಗಿದೆ. ಈ ಹೆಚ್ಚಿನ ಕರದ ದರವು ವ್ಯಾಪಾರಿಯು ಕೊಡಬೇಕಾದ ಮಾರಾಟ ಕರ ಅಥವಾ ಖರೀದಿ ಕರ ಅಥವಾ ಇವೆರಡೂ ಕರಗಳ ಮೇಲೆ ರೂಪಾಯಿಗೆ 10 ಪೈಸೆ ಪ್ರಮಾಣದಲ್ಲಿದೆ

ಮತ್ತು ಇನ್ನೂ ಹೆಚ್ಚಿನ ಕರವನ್ನು ಕರ್ನಾಟಕ ವ್ಯಾಪಾರ ಕರ ಅಧಿನಿಯಮದ ಮೇರೆಗೆ ವ್ಯಾಪಾರಿಗಳು ಮಾತ್ರ ಕೊಡಬೇಕಾಗಿದೆ. ವರ್ಷಕ್ಕೆ 10 ಲಕ್ಷ ರೂಪಾಯಿ ಅಥವಾ ಅದಕ್ಕೂ ಹೆಚ್ಚು ವಹಿವಾಟು ಮಾಡುವ ವ್ಯಾಪಾರಿಗಳಿಂದ ಬರುವ ಆದಾಯವು 1975ರಲ್ಲಿ 5 ಕೋಟಿ ರೂಪಾಯಿ ಆಗಿತ್ತು. ಇದೇ ಬಗೆಯ ಹೆಚ್ಚಿನ ಕರವನ್ನು ವರ್ಷಕ್ಕೆ 5 ರಿಂದ 1 ಲಕ್ಷ ರೂಪಾಯಿವರೆಗಾ ವಹಿವಾಟು ಮಾಡುವ ವ್ಯಾಪಾರಿಗಳಿಗೆ ವಿಧಿಸುವುದು ಯೋಗ್ಯವಾಗಿಯೆಂದು ಪರಿಗಣಿಸಲಾಗಿದೆ. ವರ್ಷಕ್ಕೆ 10 ಲಕ್ಷ ರೂಪಾಯಿಗಿಂತ ಹೆಚ್ಚು ವಹಿವಾಟು ಮಾಡುವ ವ್ಯಾಪಾರಿಗಳ ಸಂಖ್ಯೆ 6,700 ಮತ್ತು 5 ರಿಂದ 10 ಲಕ್ಷ ರೂಪಾಯಿವರೆಗೆ ವ್ಯಾಪಾರ ಮಾಡುವವರ ಸಂಖ್ಯೆ 5,700 ಆಗಿದೆ. ಮತ್ತು 5 ಲಕ್ಷ ರೂಪಾಯಿಗಿಂತ ಕಡಿಮೆ ವಹಿವಾಟು ಇರುವ ವ್ಯಾಪಾರಿಗಳ ಸಂಖ್ಯೆ 1 ಲಕ್ಷಕ್ಕಿಂತ ಹೆಚ್ಚಾಗಿದೆ.

47. ವರ್ಷಕ್ಕೆ 5 ರಿಂದ 10 ಲಕ್ಷ ರೂಪಾಯಿ ವಹಿವಾಟು ಇರುವ ವ್ಯಾಪಾರಿಗಳಿಗೆ ಈ ಹೆಚ್ಚಿನ ಕರವನ್ನು ವಿಧಿಸುವುದು ಯೋಗ್ಯವಾಗಿದೆ. 5 ಲಕ್ಷ ರೂಪಾಯಿಗಿಂತ ಕಡಿಮೆ ವಹಿವಾಟು ಮಾಡುವವರಿಗೆ ಈ ಹೆಚ್ಚಿನ ಕರವನ್ನು ವಿಧಿಸಬೇಕಾಗಿಲ್ಲ. ವರ್ಷಕ್ಕೆ 10 ಲಕ್ಷ ರೂಪಾಯಿಗಿಂತ ಹೆಚ್ಚು ವಹಿವಾಟು ಇರುವ ವ್ಯಾಪಾರಿಗಳಿಗೆ ಶೇಕಡ 10 ರಷ್ಟು ಹೆಚ್ಚಿನ ಕರ ವಿಧಿಸಿರುವುದರಿಂದ ವರ್ಷಕ್ಕೆ 5 ರಿಂದ 10 ಲಕ್ಷ ರೂಪಾಯಿ ವಹಿವಾಟು ಮಾಡುವವರಿಗೆ ಶೇಕಡ 7½ರ ಪ್ರಕಾರ ಹೆಚ್ಚಿನ ಕರ ವಿಧಿಸುವುದು ಸೂಕ್ತವಾಗುವುದು. ವರ್ಷಕ್ಕೆ 5 ರಿಂದ 10 ಲಕ್ಷ ರೂಪಾಯಿ ವಹಿವಾಟು ಮಾಡುವ ವ್ಯಾಪಾರಿಗಳ ವರ್ಗಕ್ಕೆ 6 ಕೋಟಿ ರೂಪಾಯಿ ವರಮಾನ ಬರುವುದು ಮತ್ತು ಶೇಕಡ 7½ ಪ್ರಕಾರ ಹೆಚ್ಚಿನ ಕರ ವಿಧಿಸುವದರಿಂದ ಆದಾಯವು 50 ಲಕ್ಷ ರೂಪಾಯಿ ಆಗುವುದು. ಆದುದರಿಂದ ವರ್ಷಕ್ಕೆ 5 ರಿಂದ 10 ಲಕ್ಷ ರೂಪಾಯಿ ವಹಿವಾಟು ಇರುವ ವ್ಯಾಪಾರಸ್ಥರಿಗೆ ಶೇಕಡ 71/2ಯಂತೆ ಕರ ವಿಧಿಸಲು ಉದ್ದೇಶಿಸಿವೆ. ಆ ಬಗ್ಗೆ ಪ್ರತ್ಯೇಕವಿಧೇಯಕವನ್ನು ಮಂಡಿಸಲಾಗುವುದು.

48. 10,000 ಮತ್ತು ಅದಕ್ಕೂ ಕಡಿಮೆ ಜನಸಂಖ್ಯೆಯ ಸ್ಥಳಗಳಲ್ಲಿರುವ ಸಿನಿಮಾ ಥಿಯೇಟರುಗಳಿಗೆ ಕರ ವಿಧಿಸುವುದಕ್ಕೂ ಸಂಗ್ರಹಣೆ ಮಾಡುವುದಕ್ಕೂ ಹೆಚ್ಚು ಅನುಕೂಲವಾದ ಏರ್ಪಾಟು ಮಾಡುವುದಕ್ಕಾಗಿ ಮನೋರಂಜನ ಕರ ಅಧಿನಿಯಮದಲ್ಲಿ ತಿದ್ದುಪಡಿ ಮಾಡಲು ನಾನು ಸೂಚಿಸಬಯಸುತ್ತೇನೆ. ಮನೋರಂಜನೆ ಕರಗಳ್ಳತನವನ್ನು ತಡೆಯಲು ಕಟ್ಟುನಿಟ್ಟಾದ ನಿಗಾ ಇಡುವಂತೆ ನಾವು ಕಾಲಕಾಲಕ್ಕೆ ಏರ್ಪಾಡು ಮಾಡುತ್ತ ಬಂದಿದ್ದೇವೆ. ನಾಲ್ಕು ಸಂಚಾರಿ ಪರಿಶೀಲನಾ ತಂಡಗಳು ಅನಿರೀಕ್ಷಿತ ಪರಿಶೀಲನೆಗಳನ್ನು ನಡೆಸುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಕರಗಳ್ಳತನವು ಹೆಚ್ಚಾಗಿ ನಡೆಯುತ್ತಿರುವುದು ಅನುಭವದಿಂದ ಕಂಡು ಬಂದಿದೆ. ಅದರಲ್ಲಿಯೂ ವಿಶೇಷವಾಗಿ ಅನಿರೀಕ್ಷಿತ ಪರಿಶೀಲನೆ ನಡೆಸುವುದು ಸಾಧ್ಯವಿಲ್ಲದ ಪ್ರದೇಶಗಳಲ್ಲಿ ಇದು ಇನ್ನೂ ಹೆಚ್ಚಾಗಿದೆ. ಆದುದರಿಂದ 10,000ಕ್ಕಿಂತ ಕಡಿಮೆ ಜನಸಂಖ್ಯೆಯ ಸ್ಥಳಗಳಲ್ಲಿರುವ ಸಿನಿಮಾ ಥಿಯೇಟರುಗಳವರು ತಮ್ಮ ಥಿಯೇಟರಿನ ಆಸನ ಸಾಮರ್ಥ್ಯಕ್ಕನುಗುಣವಾಗಿ ಒಂದು ನಿಗದಿಯಾದ ಮೊಬಲಗಿನ ಮನೋರಂಜನ ಕರ ಕೊಡುವಂತೆ ಏರ್ಪಾಡು ಮಾಡುವುದು ವಿಹಿತವೆಂದು ಭಾವಿಸಲಾಗಿದೆ. ಇದರಿಂದ ನಮ್ಮ ಸಂಚಾರಿ ತಂಡಗಳು ಕೂಡ ಇತರ ಪ್ರದೇಶಗಳಲ್ಲಿ ಹೆಚ್ಚು ದಕ್ಷ ರೀತಿಯಿಂದ ಪರಿಶೀಲನೆ ನಡೆಸಲು ಮತ್ತು ನಿಗಾ ಇಡಲು ಅನುಕೂಲವಾಗುವುದು.

49. ನಮ್ಮ ರಾಜ್ಯದಲ್ಲಿ ಒಟ್ಟು 1,024 ಸಿನಿಮಾ ಥಿಯೇಟರುಗಳಿವೆ. ಅವುಗಳಲ್ಲಿ 528 ಥಿಯೇಟರುಗಳು 10,000ಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಪ್ರದೇಶಗಳಲ್ಲಿವೆ. ಇವುಗಳಲ್ಲಿ 01 ಹಂಗಾಮಿ ಥಿಯೇಟರುಗಳು ಮತ್ತು 32 ಖಾಯಂ ಥಿಯೇಟರುಗಳಾಗಿವೆ. ಈ ಥಿಯೇಟರುಗಳಿಗೆ ಬರುವ ಜನರ ಸರಾಸರಿ ಸಂಖ್ಯೆಯನ್ನು ನಿರ್ಧರಿಸಲು ಇತ್ತೀಚೆಗೆ ಪರಿಶೀಲನೆ ನಡೆಸಲಾಯಿತು. ಥಿಯೇಟರುಗಳ ಒಟ್ಟು ಆಸನಗಳಲ್ಲಿ ಶೇಕಡ 33ರಷ್ಟು ಮಾತ್ರ ಸರಾಸರಿ ಭರ್ತಿಯಾಗಿರುತ್ತವೆಂದು ಈ ಪರಿಶೀಲನೆಯಿಂದ ಕಂಡುಬಂದಿದೆ. ಸಂದರ್ಶಕರ ಈ ಸರಾಸರಿ ಸಂಖ್ಯೆಗನುಸಾರ ಮನೋರಂಜನ ಕರ ವಸೂಲಿಯ ಸರಾಸರಿ ಮೊಬಲಗು, ಥಿಯೇಟರಿನ ಒಟ್ಟು ಆದಾಯದ ಶೇಕಡ 12ರಷ್ಟು ಆಗುವುದು. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು ಆದಾಯದ ಶೇಕಡ 12ರಷ್ಟು ಮನೋರಂಜನಾ ಕರ ವಿಧಿಸಬೇಕೆಂದು ನಿರ್ಧರಿಸಿರುವುದು ಯೋಗ್ಯವಾಗಿದೆ ಮತ್ತು ಅದನ್ನು ಒಂದೇ

ಮೊತ್ತದಲ್ಲಿ ವಸೂಲ ಮಾಡಿಕೊಳ್ಳಬೇಕು. ಶೇಕಡ 12ರ ಕರ ವಸೂಲಿ ಏರ್ಪಾಡಿನ ಮೇರೆಗೆ 90 ಲಕ್ಷ ರೂಪಾಯಿ ವಸೂಲು ಆಗುವುದೆಂದು ಮತ್ತು ಇದರಿಂದ 55 ಲಕ್ಷ ರೂಪಾಯಿಯ ಹೆಚ್ಚಿನ ವರಮಾನ ದೊರೆಯುವುದೆಂದು ನಿರೀಕ್ಷಿಸಲಾಗಿದೆ.

ಸಮಗ್ರ ನೋಟ

50. 1977-78ನೆಯ ಸಾಲಿನ ಬಜೆಟ್ ಅಂದಾಜುಗಳು 38.20 ಕೋಟಿ ರೂಪಾಯಿ ಕೊರತೆಯನ್ನು ಸೂಚಿಸುತ್ತವೆ, ನಾನು ಇದೀಗ ವಿವರಿಸಿದ ಕ್ರಮಗಳಿಂದ ಈ ಕೊರತೆಯು 1.05 ಕೋಟಿ ರೂಪಾಯಿಯಷ್ಟು ಕಡಿಮೆಯಾಗಿ 37.15 ಕೋಟಿ ರೂಪಾಯಿಗಿಳಿಯುವುದು. ನಮಗೆ ಈ ಹಿಂದಿನ ವರ್ಷಗಳ ಬಾಬತ್ತು ಬರಬೇಕಾಗಿರುವ ಬಾಕಿಗಳೂ ಸೇರಿ ಕೇಂದ್ರ ಕರಗಳಿಂದ ರಾಜ್ಯದ ಪಾಲಿನ ರೂಪದಲ್ಲಿ ಈ ವರ್ಷ ಇನ್ನೂ ಸುಮಾರು 5 ಕೋಟಿ ರೂಪಾಯಿ ದೊರೆಯಬಹುದೆಂದು ನಿರೀಕ್ಷಿಸುತ್ತಿದ್ದೇವೆ. ಇದರಿಂದ ನಮ್ಮ ಕೊರತೆಯು ಇನ್ನಷ್ಟು ಕಡಿಮೆಯಾಗಿ 32.15 ಕೋಟಿ ರೂಪಾಯಿಗಿಳಿಯುವುದು. ಈ ಕೊರತೆಯನ್ನು ತುಂಬಿಕೊಳ್ಳಲು ಈ ಹಂತದಲ್ಲಿ ನಾನು ಯಾವ ನಿರ್ದಿಷ್ಟ ಕ್ರಮಗಳನ್ನೂ ಸೂಚಿಸುತ್ತಿಲ್ಲ. ನಮ್ಮ ವಾಡಿಕೆಯ ವರಮಾನಗಳ ಹೆಚ್ಚಳ ಮತ್ತು ಸುಧಾರಿತ ವಸೂಲಾತಿಗಳಿಂದ ನಾವು ಈ ಕೊರತೆಯನ್ನು ಬಹುಮಟ್ಟಿಗೆ ತುಂಬಿಕೊಳ್ಳಬಹುದೆಂದು ಆಶಿಸುತ್ತೇವೆ. ಆದರೆ ಇವೆರಡೂ ಬಹುಮಟ್ಟಿಗೆ ಒಳ್ಳೇ ಮುಂಗಾರು ಮಳೆಯನ್ನು ಅವಲಂಬಿಸಿವೆ. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅತ್ಯಧಿಕ ಸಂಪನ್ಮೂಲಗಳು ದೊರೆಯುವಂತೆ ನಾವು ಯೋಜನೇತರ ವೆಚ್ಚದಲ್ಲಿ ಮಿತವ್ಯಯವನ್ನು ಕೂಡ ಸಾಧಿಸಲು ಮತ್ತು ಅವಶ್ಯವಾದ ಇತರ ಕ್ರಮಗಳನ್ನು ಕೈಕೊಳ್ಳಲು ಸಹ ಉದ್ದೇಶಿಸಿದ್ದೇವೆ.

51. ಪೂರ್ಣ ವರ್ಷದ ಬಜೆಟ್ ಅಂದಾಜುಗಳನ್ನು ಸದನದ ಮುಂದೆ ಮಂಡಿಸಲಾಗುತ್ತಿದೆ. ಆದರೆ ಇಡೀ ವರ್ಷದ ಬಜೆಟ್ ವೆಚ್ಚದ ಬಗ್ಗೆ ಸದನವು ಒಪ್ಪಿಗೆ ನೀಡುವ ಮೊದಲು ಬೇಡಿಕೆಗಳ ಮೇಲೆ ಪೂರ್ಣ ಚರ್ಚೆ ನಡೆಯಲು ಸಾಕಷ್ಟು ಕಾಲಾವಕಾಶ ಒದಗಿಸುವ ದೃಷ್ಟಿಯಿಂದ ವರ್ಷದ ಮೊದಲ ನಾಲ್ಕು ತಿಂಗಳ ವೆಚ್ಚದ ಮಟ್ಟಿಗೆ ಲೇಖಾನುದಾನದ ಬಗ್ಗೆ ತಮ್ಮ ಅನುಮತಿ ಕೋರುತ್ತೇನೆ.

1977-78ನೇ ವರ್ಷದ ಬಜೆಟ್ ಅಂದಾಜುಗಳನ್ನು ತಮ್ಮ ಪರಿಶೀಲನೆಗೆ ಮತ್ತು ಅನುಮೋದನೆಗೆ ಒಪ್ಪಿಸುತ್ತೇನೆ.

ಬಜೆಟ್‌ನ ವಿಹಂಗಮ ನೋಟ

ಕೋಟಿ ರೂಪಾಯಿ

	ಬಜೆಟ್ ಅಂದಾಜುಗಳು 1976-77	ಪರಿಷ್ಕೃತ ಅಂದಾಜುಗಳು 1976-77	ಬಜೆಟ್ ಅಂದಾಜುಗಳು 1977-78
ಪ್ರಾರಂಭದ ಶಿಲ್ಕು	+ 2 06	(—) 2.97	(—) 12.14
ಎ. ರಾಜಸ್ವ ಲೆಕ್ಕ			
I. ಜಮೆ :			
ರಾಜ್ಯ ತೆರಿಗೆ ...	261.85	267.55	293 52
ಕೇಂದ್ರ ತೆರಿಗೆಯ ಪಾಲು ...	93.00	91.12	97.11
ಕೇಂದ್ರ ಸರ್ಕಾರದಿಂದ ಪಡೆದ ಅನುದಾನ	32.62	44.66	50.09
ತೆರಿಗೆಯೇತರ ರಾಜಸ್ವ ...	126.47	148.41	154.75
ಒಟ್ಟು—ಎI.	513.94	552.34	595.47

II. ವೆಚ್ಚ :			
ಸಾಮಾಜಿಕ ಹಾಗೂ ಸಾಮುದಾಯಿಕ ಸೇವೆಗಳು ...	186.61	191.03	**224.93**
ಆರ್ಥಿಕ ಸೇವೆಗಳು ...	156.81	177.23	**178.32**
ಸಾಮಾನ್ಯ ಸೇವೆಗಳು ...	147.36	139.50	**158.84**
ಸಹಾಯಾನುದಾನ ಮತ್ತು ಅಂಶದಾನ ...	9.00	8.00	9.75
ಒಟ್ಟು—ಎII :	499.78	505.76	570.84
ಎ. ರಾಜಸ್ವ ಲೆಕ್ಕ ಹೆಚ್ಚಳ (+)	+14.16	+46.58	+24.63

ಕೋಟಿ ರೂಪಾಯಿ

	ಬಜೆಟ್ ಅಂದಾಜುಗಳು 1976–77	ಪರಿಷ್ಕೃತ ಅಂದಾಜುಗಳು 1976–77	ಬಜೆಟ್ ಅಂದಾಜುಗಳು 1977–78
ಬಿ. ಬಂಡವಾಳ ಲೆಕ್ಕ			
I. ಜಮೆ :			
ಭಾರತ ಸರ್ಕಾರದಿಂದ ಪಡೆದ ಸಾಲ	70.42	65.11	73.06
ಬಹಿರಂಗ ಮಾರುಕಟ್ಟೆ ಸಾಲ, ಇತ್ಯಾದಿ	25.88	18.71	24.07
ಎಲ್‌ಐಸಿ, ಆರ್‌ಬಿಐ, ಎದ್‌ಎಐಎರ್ ಮತ್ತು ಎನ್‌ಸಿಡಿಸಿಗಳಿಂದ ಪಡೆದ ಸಾಲ	15.75	16.60	19.25
ಸಾಲ ಮತ್ತು ಮುಂಗಡಗಳ ವಸೂಲಿ	23.20	20.89	26.25
ಸಾರ್ವಜನಿಕ ಲೆಕ್ಕ (ನಿವ್ವಳ) ಮುಂತಾದವು	32.89	31.43	35.50
ಒಟ್ಟು ಬಿ I	168.14	152.74	179.13
II. ವಿತರಣೆಗಳು :			
ಬಂಡವಾಳ ವೆಚ್ಚ	81.46	96.74	107.62
ಕೇಂದ್ರ ಸಾಲಗಳ ಮರುಪಾವತಿ	39.00	29.04	36.62
ಬಹಿರಂಗ ಮಾರುಕಟ್ಟೆ ಸಾಲ ಮುಂತಾದವುಗಳ ಮರುಪಾವತಿ	7.03	7.02	5.32
ಎಲ್‌ಐಸಿ, ಆರ್‌ಬಿಐ, ಎಸ್‌ಎಐಎಲ್ ಮತ್ತು ಎನ್‌ಸಿಡಿವಗೆ ಸಾಲಗಳ ಮರುಪಾವತಿ	2.71	2.73	2.95
ಸಾಲ ಮತ್ತು ಮುಂಗಡಗಳವಿ ತರಣೆ	82.94	72.96	77.31
ಒಟ್ಟು—ಬಿ. II :	213.14	208.49	229.82

ಬಿ.	ಬಂಡವಾಳ ಕೊರತೆ (—)	—45.00	—55.75	—50.69
ಸಿ.	ಒಟ್ಟಿನ ಮೇಲೆ ಕೊರತೆ	—30.84	—9.17	—26.06
ಡಿ.	ಮುಕ್ತಾಯದ ಶಿಲ್ಕು	—28.78	—12.14	—38.20
ಇ.	ವಜಾ ಹೆಚ್ಚಿನ ತೆರಿಗೆ	+16.25	...	6.05*
ಎಫ್.	ಒಟ್ಟಿನ ಮೇಲೆ ಕೊರತೆ	—12.53	—	—32.15

* ಕೇಂದ್ರ ತೆರಿಗೆಯಿಂದ ಹೆಚ್ಚಿಗೆ ಬಂದ 5 ಕೋಟಿ ರೂಪಾಯಿ ಇದರಲ್ಲಿ ಸೇರಿರುತ್ತದೆ.

SUPPLEMENTARY ESTIMATES 1976-77 (Second and Final Instalment) Presentation

SRI M. Y. GHORPADE (Minister for Finance).—I beg to present: the Supplementary Estimates 1976-77 (II and Final Instalment) as required under Article 205 (1) of the Constitution of India.

MADAM SPEAKER.—The Supplementary Estimate 1976-77 (II and Final Instalment) is presented.

MADAM SPEAKER.—The House will now adjourn and meet on Monday, 28th March 1977 at 1 p.m.

The House adjourned at Fifteen minutes past two of the clock to meet again at One of the clock on Monday the 28th March 1977.